# ಅಮರ ಬಾಪು ಚಿಂತನ

ಗಾಂಧಿ ದನಿ ದರ್ಪಣ
ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ

# AMARA BAAPU CHINTANA

Mirror of Gandhi
Kannada & English Bi-Monthly

ಸಂಪುಟ : 13 । ಸಂಚಿಕೆ : 05 । ಬೆಲೆ : ರೂ. 20/– । ಪುಟ : 40 । ಸೆಪ್ಟೆಂಬರ್–ಅಕ್ಟೋಬರ್ 2025

## ಗಾಂಧೀ ಜಯಂತಿ ವಿಶೇಷ ಸಂಚಿಕೆ



# ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

20ನೇ ಮಹಡಿ, ವಿಶ್ವೇಶ್ವರಯ್ಯ ದೊಡ್ಡಗೋಪುರ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001

E-mail: md.kbdc2022@gmail.com Ph:080-23198122 Web site:www.kbdc.karnataka.gov.in



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು



**ಶ್ರೀ ಡಿ.ಕೆ.ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು



**ಡಾ॥ ಹೆಚ್.ಸಿ.ಮಹಾದೇವಪ್ಪ**
ಮಾನ್ಯ ಸಮಾಜಕಲ್ಯಾಣ ಇಲಾಖೆ ಸಚಿವರು



**ಶ್ರೀ ರಾಮಪ್ಪ ಎಂ.**
ಅಧ್ಯಕ್ಷರು
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

**ಪ್ರಸ್ತಾವನೆ:** 2015–16ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದಲ್ಲಿ ಭೋವಿ ಜನಾಂಗದ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಘೋಷಿಸಲಾಗಿದೆ.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.**

**ಸ್ವಯಂ ಉದ್ಯೋಗ ಯೋಜನೆ (ನೇರಸಾಲ):** ಸ್ವಯಂ ಉದ್ಯೋಗ ಯೋಜನೆಯಡಿ ಪರಿಶಿಷ್ಟ ಜಾತಿ ಭೋವಿ ಸಮುದಾಯದ ನಿರುದ್ಯೋಗ ಯುವಕ ಯುವತಿಯರಿಗೆ ಕಿರು ಆರ್ಥಿಕ ಚಟುವಟಿಕೆಗಳಿಗೆ ರೂ. 1,00,000/– ಘಟಕ ವೆಚ್ಚದಲ್ಲಿ ರೂ. 50,000/– ಸಹಾಯಧನ ಹಾಗೂ ರೂ. 50,000/– ಸಾಲವಾಗಿದ್ದು, ನಿಗಮದಿಂದ ಒದಗಿಸಲಾಗುತ್ತದೆ.



**ಉದ್ಯಮಶೀಲತಾ ಯೋಜನೆ: ಐ.ಎಸ್.ಬಿ (ಬ್ಯಾಂಕ್ ಸಹಯೋಗದಲ್ಲಿ):–**

1. **ಫಾಸ್ಟ್ ಫುಡ್ ಟ್ರಕ್ ಟ್ರೈಲರ್/ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್:** ಫುಡ್‌ಕಾರ್ಟ್ ವಾಹನಗಳ ಘಟಕ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಟ ರೂ.4.00 ಲಕ್ಷಗಳ ಸಹಾಯಧನ ಉಳಿದಂತೆ ಬ್ಯಾಂಕ್ ಸಾಲವಾಗಿರುತ್ತದೆ.
2. **ಹೈನುಗಾರಿಕೆ:** ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ. 50ರಷ್ಟು ಅಥವಾ ಗರಿಷ್ಠ 1.25 ಲಕ್ಷಗಳ ಸಹಾಯಧನ ನೀಡಲಾಗುವುದು.
3. **ಮೇಕೆ /ಕುರಿ ಸಾಕಾಣಿಕೆ:** ಮೇಕೆ /ಕುರಿ ಸಾಕಾಣಿಕೆ ಉದ್ದೇಶಕ್ಕೆ ಘಟಕ ವೆಚ್ಚದ ಶೇ 50 ರಷ್ಟು ಅಥವಾ ಗರಿಷ್ಠ ರೂ1.25 ಲಕ್ಷಗಳ ಸಹಾಯಧನ ನೀಡಲಾಗುವುದು.
4. **ಇತರೆ ಉದ್ದೇಶ:** ವ್ಯಾಪಾರ ಮತ್ತು ಇತರೆ ಉದ್ದೇಶಗಳಿಗೆ ಘಟಕ ವೆಚ್ಚದ ಶೇ.70ರಷ್ಟು ಅಥವಾ ಗರಿಷ್ಠ ರೂ. 2.00 ಲಕ್ಷಗಳ ಸಹಾಯಧನ



**ಸ್ವಾವಲಂಬಿ ಸಾರಥಿ ಯೋಜನೆ:** ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಭೋವಿ ಸಮುದಾಯದವರಿಗೆ ಸರಕು ಸಾಗಾಣಿಕೆ/ಪ್ರವಾಸಿ ವಾಹನ (ಹಳದಿ ಬೋರ್ಡ್) ಖರೀದಿಸಲು ಘಟಕ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಟ ರೂ.4.00 ಲಕ್ಷ ಸಹಾಯಧನ ಹಾಗೂ ಉಳಿದ ಭಾಗ ಬ್ಯಾಂಕ್ ಸಾಲವಾಗಿರುತ್ತದೆ.

**ಮೈಕ್ರೋ ಕ್ರೆಡಿಟ್ ಯೋಜನೆ:** ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಭೋವಿ ಸಮುದಾಯದ ಕನಿಷ್ಟ 10 ಮಹಿಳಾ ಸದಸ್ಯರ ಸ್ವಸಹಾಯ ಗುಂಪಿನ ಆದಾಯ ಗಳಿಸುವ ಉತ್ಪಾದನಾ ಚಟುವಟಿಕೆಗಳಿಗೆ ನಿಗಮದಿಂದಲೇ ನೇರವಾಗಿ ರೂ.5.00 ಲಕ್ಷ ಆರ್ಥಿಕ ಸಹಾಯ ನೀಡಲಾಗುವುದು.

1. ರೂ. 2.50 ಲಕ್ಷ ಸಹಾಯಧನ ಮತ್ತು ರೂ. 2.50 ಲಕ್ಷ ಬೀಜಧನವನ್ನು ಒದಗಿಸಲಾಗುವುದು.



**ಭೂ ಒಡೆತನ ಯೋಜನೆ:** ಭೂ ಒಡೆತನ ಯೋಜನೆಯು ನಿಗಮದ ಪ್ರತಿಷ್ಠಿತ ಯೋಜನೆಯಾಗಿದ್ದು, ಈ ಯೋಜನೆಯಡಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರದ ಭೂ ಮಾಲೀಕರಿಂದ ಜಮೀನನ್ನು ಖರೀದಿ ಮಾಡಿ ಭೋವಿ ಸಮುದಾಯದ ಭೂರಹಿತ ಮಹಿಳಾ ಕೃಷಿ ಕಾರ್ಮಿಕರನ್ನು ಭೂ ಮಾಲೀಕರನ್ನಾಗಿ ಮಾಡಲಾಗುವುದು.

**ಗಂಗಾ ಕಲ್ಯಾಣ ಯೋಜನೆ–ವೈಯಕ್ತಿಕ ಕೊಳವೆ ಬಾವಿ / ಏತ ನೀರಾವರಿ:** ಗಂಗಾ ಕಲ್ಯಾಣ ಯೋಜನೆ ಯೋಜನೆಯಡಿ ಕನಿಷ್ಠ 1.20 ಎಕರೆಯಿಂದ ಗರಿಷ್ಟ 5.00 ಎಕರೆ ಒಳಗೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತರ ಖುಷ್ಕಿ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆಸಿ, ಪಂಪ್ ಸೆಟ್ ಅಳವಡಿಸಿ, ವಿದ್ಯುದೀಕರಣಗೊಳಿಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ.



**ದೌರ್ಜನ್ಯ ಪ್ರಕರಣ/ಆಕಸ್ಮಿಕ ಅವಘಡಕ್ಕೊಳಗಾಗಿ ಮರಣ ಹೊಂದಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಡಿ ಸೌಲಭ್ಯ ಒದಗಿಸಲಾಗುವುದು:** ಪರಿಶಿಷ್ಟ ಜಾತಿ ಭೋವಿ ಸಮುದಾಯದವರು ಅನ್ಯ ಸಮುದಾಯದವರಿಂದ ದೌರ್ಜನ್ಯಕ್ಕೊಳಪಟ್ಟು ತೀವ್ರ ತರಹದ ಗಾಯಗಳಾಗಿ ಅಂಗವೈಕಲ್ಯಕ್ಕೆ ತುತ್ತಾಗಿರುವಂತಹ / ಆಕಸ್ಮಿಕ ಅವಘಡಕ್ಕೊಳಗಾಗಿ ಮರಣ ಹೊಂದಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಗಮದಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳಡಿ ಸೌಲಭ್ಯವನ್ನು ಒದಗಿಸಲಾಗುವುದು.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ಜಾತಿಯ ವಿವರಗಳು.**

| | | | |
|---|---|---|---|
| 1. ಭೋವಿ | 2. ಒಡ್ | 3. ಒಡ್ಡೆ | 4. ಒಡ್ಡರ್ |
| 5. ವಡ್ಡರ್ | 6. ವಡ್ಡರ | 7. ಕಲ್ಲು ಒಡ್ಡರ | 8. ಭೋವಿ (non-besta) |



ಸಹಿ/–
**ವ್ಯವಸ್ಥಾಪಕ ನಿರ್ದೇಶಕರು**

ಅಮರ ಬಾಪು ಚಿಂತನ
ಸಂಪುಟ: 13 ಸಂಚಿಕೆ: 5 ಸೆಪ್ಟೆಂಬರ್–ಅಕ್ಟೋಬರ್ 2025

ಸಂಪಾದಕೀಯ



# ಗಾಂಧೀ ಮತ್ತು ಶಾಸ್ತ್ರಿ

ಪ್ರತಿ ವರ್ಷ ಅಕ್ಟೋಬರ್ 2 ರಂದು ದೇಶದ ಇಬ್ಬರು ಮಹಾನ್ ವ್ಯಕ್ತಿಗಳ ಹುಟ್ಟುಹಬ್ಬವನ್ನು ಆಚರಿಸಲಾಗುತ್ತದೆ. ಒಬ್ಬರು ರಾಷ್ಟ್ರಪಿತ ಮಹಾತ್ಮ ಗಾಂಧಿಯಾದರೆ ಮತ್ತೊಬ್ಬರು ಸರಳ ಸಜ್ಜನಿಕೆಯ ಲಾಲ್ ಬಹದ್ದೂರ್ ಶಾಸ್ತ್ರಿ. ಒಬ್ಬರು ರಾಜ್‌ಘಾಟ್ ಮತ್ತೊಬ್ಬರು ವಿಜಯಘಾಟ್‌ನಲ್ಲಿ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರಿಬ್ಬರ ಸರಳ ಬದುಕು, ಅಪ್ರತಿಮ ರಾಷ್ಟ್ರ ಪ್ರೇಮ ಸದಾ ಅನುಕರಣೀಯ.

ಗಾಂಧೀಜಿ ರಾಷ್ಟ್ರಪಿತನಾಗಿರಬಹುದು. ಆದರೆ ಅವರು ವಿಶ್ವ ಮಾನವ. ಶ್ರೇಷ್ಠ ಮಾನವತಾವಾದಿ. ಇಂದಿಗೂ ಅವರು ವಿಶ್ವದ ಅನೇಕ ಆಂದೋಲನಗಳಿಗೆ ಮತ್ತು ಅಸಂಖ್ಯ ನಾಯಕರಿಗೆ ಸ್ಫೂರ್ತಿಯಾಗಿದ್ದಾರೆ. ಸತ್ಯಾಗ್ರಹ, ಅಹಿಂಸಾ ಚಳವಳಿ ಅವರ ಜೀವನ ವಿಧಾನವಾಗಿತ್ತು. ಹೀಗಾಗಿ ಎಲ್ಲೆಲ್ಲಿ ಸಂಘರ್ಷಗಳು ಶಾಂತಿಯುತವಾಗಿ ಇತ್ಯರ್ಥ ಕಾಣುವುದೋ ಅಲ್ಲಿ ಗಾಂಧಿ ಇದ್ದಾರೆ. ಅಮೇರಿಕದ ಮಾರ್ಟಿನ್ ಲೂಥರ್ ಕಿಂಗ್ (ಜೂ) ಅವರಲ್ಲಿ, ದಕ್ಷಿಣ ಕೊರಿಯಾದ ಹ್ಯಾಮ್ ಸೋಕ್ ಹಾನ್, ಆಫ್ರಿಕಾದ ನೆಲ್ಸನ್ ಮಂಡೇಲಾ ಹೀಗೆ ಅನೇಕ ನಾಯಕರಿಗೆ ಗಾಂಧೀ ಸ್ಫೂರ್ತಿ.



ಎಲ್ಲೆಲ್ಲಿ ಜನರಿಗೆ ಸರಳ, ಆರೋಗ್ಯಕರ ಮತ್ತು ಆದರ್ಶನೀಯ ಬದುಕು ಬೇಕೆನ್ನಿಸುವುದೋ ಅಲ್ಲೆಲ್ಲ ಗಾಂಧೀಜಿ ಇದ್ದಾರೆ. ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿನ ಗಾಂಧೀ ಆಶ್ರಮಗಳು ಸರಳ ಜೀವನಕ್ಕೆ ಮಾದರಿ. ಲೌಕಿಕ ಆಮಿಷಗಳು ಹೆಚ್ಚಾಗಿರುವ ಇಂದಿನ ಸಂದರ್ಭಗಳಲ್ಲಿಯೂ ಗಾಂಧಿ ಮಾರ್ಗವು ಅತ್ಯುತ್ತಮ ಎಂದು ಹೇಳಬಹುದು. ನಿಶ್ಶಸ್ತ್ರೀಕರಣದ ಮಾತುಕತೆ ಸಂದರ್ಭದಲ್ಲಿಯೂ ಗಾಂಧೀಜಿ ಇದ್ದಾರೆ. ಈಗ ಎಲ್ಲೆಲ್ಲಿ ಯುದ್ಧ ಅಥವಾ ಸಂಘರ್ಷಗಳನ್ನು ಪರಿಹರಿಸುವ ಪ್ರಯತ್ನಗಳು ನಡೆಯುವುದೋ ಅಲ್ಲಿ ಗಾಂಧೀಜಿಯ ಶಾಂತಿ ಮಂತ್ರವಿರುತ್ತದೆ. ಗಾಂಧೀಜಿ ಪರಮಾಣು ಯುಗದ ಆರಂಭ ಕಾಲದಲ್ಲಿದ್ದರು. "ಈಗ ವಿಶ್ವವು ಅಹಿಂಸೆಯನ್ನು ಅಳವಡಿಸಿ ಕೊಳ್ಳದಿದ್ದರೆ, ಅದು ಮನುಕುಲಕ್ಕೆ ನಿಶ್ಚಿತವಾಗಿಯೂ ನಾಶವನ್ನು ನಿರೂಪಿಸುತ್ತದೆ" ಎಂದು ಆಗಲೇ ಗಾಂಧೀಜಿ ಎಚ್ಚರಿಸಿದ್ದರು.

ಸರಳ ಸಜ್ಜನಿಕೆಯ ಲಾಲ್ ಬಹಾದೂರ್ ಶಾಸ್ತ್ರಿ ಸತ್ಯ, ನಮ್ರತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದರು. ಭಾರತದ ಎರಡನೆಯ ಪ್ರಧಾನಿಯಾಗಿ ಅವರು ದೇಶವನ್ನು ಕಷ್ಟದ ಸಮಯದಲ್ಲಿ ಮುನ್ನಡೆಸುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಪರಿಸ್ಥಿತಿ ಕಠೋರವಾಗಿ ಕಂಡರೂ ಜೈ ಜವಾನ್, ಜೈ ಕಿಸಾನ್ ಎಂದು ಘೋಷಿಸಿ ಅದನ್ನು ನಿಭಾಯಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದರು.

ಗಾಂಧೀಜಿ ಅಸಹಕಾರ ಚಳವಳಿಗೆ ಕರೆ ನೀಡಿದಾಗ ಅದರಲ್ಲಿ ಪಾಲ್ಗೊಳ್ಳಲು ಶಾಸ್ತ್ರಿ ತಮ್ಮ ಶಾಲೆಯಿಂದ ಹೊರಬಂದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿದ್ದ ಅವರು ತಮ್ಮ 17ನೆಯ ವಯಸ್ಸಿನಲ್ಲಿಯೇ ಮೊದಲ ಬಾರಿಗೆ ಜೈಲು ವಾಸ ಅನುಭವಿಸಿದರು. ಅವರು ಲಲಿತಾ ದೇವಿಯನ್ನು ವಿವಾಹವಾದಾಗ, ಮಾವನಿಂದ ಪಡೆದದ್ದು ಐದು ಗಜ ಖಾದಿ ಬಟ್ಟೆ! ಸ್ವಾತಂತ್ರ್ಯಾಂತರ ಶಾಸ್ತ್ರೀಜಿ ಅನೇಕ ಹುದ್ದೆಗಳ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಿದರು.

ಹಸಿರು ಕ್ರಾಂತಿ ಮತ್ತು ಶ್ವೇತ ಕ್ರಾಂತಿ ಅವರ ಅಮೂಲ್ಯ ಕೊಡುಗೆಗಳು. ರೈತರು ಸ್ವಾವಲಂಬಿಗಳಾಗಬೇಕೆನ್ನುವುದು ಅದರ ಉದ್ದೇಶ. ಶಾಸ್ತ್ರೀಜಿಯವರ ಮತ್ತೊಂದು ಮಹತ್ವದ ಕೊಡುಗೆ ಎಂದರೆ, ಭಾರತ–ಪಾಕಿಸ್ತಾನ ಯುದ್ಧವಾದಾಗ ಅದನ್ನು ಅತ್ಯಂತ ಸಮರ್ಥದಿಂದ ಎದುರಿಸಿದ್ದು ಮತ್ತು ಭಾರತದ ರಕ್ಷಣಾ ಬಲವನ್ನು ಜಗತ್ತಿಗೇ ತೋರಿಸಿದ್ದು. ಯುದ್ಧ ಅಂತ್ಯವಾಗಿ ತಾಷ್ಕೆಂಟ್ ಒಪ್ಪಂದಕ್ಕೆ, ಅಂದರೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದು ಒಂದು ಐತಿಹಾಸಿಕ ಮತ್ತು ಶಾಸ್ತ್ರೀಜಿಯವರ ಮುತ್ಸದ್ದಿತನಕ್ಕೆ ಒಂದು ಉದಾಹರಣೆ. ಅದರ ಅನಂತರವೇ ಅವರು ನಿಧನರಾದುದು ವಿಷಾದನೀಯ.

ಪ್ರಧಾನ ಮಂತ್ರಿಯಾಗಿದ್ದ ಅಲ್ಪಾವಧಿಯಲ್ಲಿ ಶಾಸ್ತ್ರೀಜಿ ಭಾರತವನ್ನು ಅನೇಕ ಕಠಿಣ ಪರಿಸ್ಥಿತಿಗಳಿಂದ ಹೊರತರುವಲ್ಲಿ ಯಶಸ್ವಿಯಾದರು. ಅವರು ಒಬ್ಬ ಮಹಾನ್ ನಾಯಕರಾಗಿದ್ದರು. ಗಾಂಧೀಜಿಯವರ ಸರಳ ಜೀವನವನ್ನು ಅಳವಡಿಸಿಕೊಂಡಿದ್ದ ಅಪರೂಪದ ವ್ಯಕ್ತಿ.

ಸಂಪಾದಕರು
**ಜೀರಿಗೆ ಲೋಕೇಶ್**

ಸಲಹಾ ಸಮಿತಿ
ಡಾ॥ ವೂಡೇ ಪಿ. ಕೃಷ್ಣ
ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ
ಎಚ್. ಕೃಷ್ಣ

ಸಂಪಾದಕೀಯ ನೆರವು
ಎನ್. ಗಾಯತ್ರಿದೇವಿ

ಉಪ ಸಂಪಾದಕರು
ಪ್ರಣವ
ಸುಮ ಚಂದ್ರಶೇಖರ್

ಜಾಹಿರಾತು ವ್ಯವಸ್ಥಾಪಕರು
ಪಿ.ಎಸ್. ಗುರುರಾಜ್

ಅಂಚೆ ನಿರ್ವಹಣೆ
ಕೆ.ದಕ್ಷಿಣಾಮೂರ್ತಿ

ಕಾನೂನು ಸಲಹೆಗಾರರು
ವಿಜಯ್ ನಾರಾಯಣ್

ಲೆಕ್ಕ ಪರಿಶೋಧಕರು
ರಾಜಶೇಖರ ಐತಾಳ್

ಪ್ರತಿನಿಧಿ
ಚೆನ್ನು ಎಸ್. ಮಠದ್(ದೆಹಲಿ)

**AMARA BAAPU CHINTANA**
Regd.office : Gandhi Bhavana, Kumara Park East, Bangalore-560 001
Mobile : 94480 42653, 90356 18076
E-mail :editor.abc2020@gmail.com, visit us at : www.amarabaapuchintana.org, facebook.com/amarabaapuchintana

# ಈ ಸಂಚಿಕೆಯಲ್ಲಿ...

5 ಗಾಂಧಿ ಮಹಾತ್ಮ
ಜಯದೇವಿ ತಾಯಿ ಲಿಗಾಡೆ

6 ಬಾಪು ನೀವು ಅಮರ
ವಿಶ್ವನಾಥ ಎನ್. ನೇರಳಕಟ್ಟೆ

9 ಅಹಿಂಸೆ ದೌರ್ಬಲ್ಯವಲ್ಲ, ಅನಿವಾರ್ಯ
ಅರವಿಂದ ಚೊಕ್ಕಾಡಿ

13 ಗಾಂಧೀಜಿ–ಒಂದು ದಿನ
ಸಿದ್ದವನಹಳ್ಳಿ ಕೃಷ್ಣಶರ್ಮ

17 ಬಾಪು ಬಾಣಂತಿ ಸೇವೆ!
ಗೊರೂರು ರಾಮಸ್ವಾಮಿ ಅಯ್ಯಂಗಾರ್

23 ಗುರುದೇವ ಮತ್ತು ಗಾಂಧೀಜಿ

27 ಸರಳ ಸಜ್ಜನ ಲಾಲ್ ಬಹದ್ದೂರ್ ಶಾಸ್ತ್ರಿ

31 The Gift of India
Sarojini Naidu

32 A Glimse of Sabarmati Ashram

34 Scholarly Books on Gandhi

35 Mohandas Gandhi Today
Homer A. Jack

37 Gandhi Hill facelift

**ಲೇಖನಗಳು ಆಯಾ ಲೇಖಕರ ಅಭಿಪ್ರಾಯಗಳು**

ಆಸಕ್ತ ಲೇಖಕರು ಗಾಂಧಿ ವಿಚಾರಧಾರೆಯ ಚಿಂತನಪ್ರದ ಲೇಖನ, ಕವನ, ಹಾಗೂ ಗಾಂಧಿಪ್ರಣೀತ ತತ್ವಗಳಿಂದ ಪ್ರೇರಿತ ರಚನಾತ್ಮಕ ಸೇವಾ ಕೈಂಕರ್ಯ ಮಾಡುತ್ತಿರುವ ಸಂಘ ಸಂಸ್ಥೆಗಳ ಪರಿಚಯಗಳನ್ನು ನಮಗೆ ಬರೆದು ಕಳುಹಿಸಿ. ಸೂಕ್ತವೆನಿಸಿದ್ದನ್ನು ಪ್ರಕಟಿಸಲಾಗುವುದು. ಲೇಖನ ಪತ್ರಿಕೆಯ ವಿಳಾಸಕ್ಕೆ ಅಥವಾ editor.abc2020@gmail.com ಕಳುಹಿಸಿ

ಅಮರ ಬಾಪು ಚಿಂತನ
ಗಾಂಧಿ ದನಿ ದರ್ಪಣ — ಕನ್ನಡ ಮತ್ತು ಆಂಗ್ಲ ದ್ವೈಮಾಸಿಕ
AMARA BAAPU CHINTANA
Mirror of Gandhi — Kannada & English Bi-Monthly
Regd. Office : Gandhi Bhavan, Kumara Park East, Bangalore-560 001



13th ANNIVERSARY

'ಅಮರ ಬಾಪು ಚಿಂತನ' ಇದೀಗ ಹೊಸ ಸ್ವರೂಪದ ಆನ್ಲೈನ್ ಮಾಧ್ಯಮಕ್ಕೆ ಪ್ರವೇಶ !

ನಿಮ್ಮ ಪ್ರೀತಿಯ 'ಅಮರ ಬಾಪು ಚಿಂತನ' ಪತ್ರಿಕೆ ಮುದ್ರಣ ಮಾಧ್ಯಮದಿಂದ ಡಿಜಿಟಲ್ ಮಾಧ್ಯಮಕ್ಕೆ ಹೆಜ್ಜೆಯನ್ನು ಇಡುತ್ತಿದೆ. 13 ವಸಂತಗಳನ್ನು ಕಂಡ ಪತ್ರಿಕೆಯು ಅಂತರ್ಜಾಲದ ಮುಖಾಂತರ ಆನ್‌ಲೈನ್ ಪತ್ರಿಕೆಯಾಗಿ ಪ್ರಕಟವಾಗುತ್ತದೆ. ಬದಲಾಗಿರುವ ತಂತ್ರಜ್ಞಾನದಿಂದಾಗಿ ನಿಮ್ಮ ಕೈಬೆರಳ ತುದಿಯಲ್ಲೆ ಅಂದರೆ
www.amarabaapuchintana.org
ಕ್ಲಿಕ್ಕಿಸುವುದರ ಮೂಲಕ ಪತ್ರಿಕೆ ಸಮಗ್ರ ಸಂಚಿಕೆಯನ್ನು ಓದಬಹುದು. ಹೆಚ್ಚೆಚ್ಚು ಓದುಗರು ಆನ್‌ಲೈನ್ ಪತ್ರಿಕೆಗೆ ನೊಂದಾವಣೆ ಮಾಡಿಕೊಳ್ಳುವ ಮುಖಾಂತರ ಪ್ರೋತ್ಸಾಹ ನೀಡಬೇಕೆಂದು ಕೋರುತ್ತೇವೆ.

Editor-in-Chief :
JEERIGE LOKESH

Advisory Board
- Dr.Wooday P Krishna
- Prof.Mallepuram G.Venkatesh
- H.Krishna

ಗಾಂಧಿ
ಒಂದು
ಶಕ್ತಿ, ಸಿದ್ಧಾಂತ,
ಪ್ರಭಾವ, ವ್ಯಕ್ತಿತ್ವ,
ಅಹಿಂಸಾ ಹೋರಾಟ

For Details Contact
94480 42653

For Advertisement
90356 18076

editor.abc2020@gmail.com
facebook.com/amarabaapuchintana
www.amarabaapuchintana.org

Scan QR Code

ನನ್ನ ಜೀವನವೇ ನನ್ನ ಸಂದೇಶ | My Life is My Message

# ಗಾಂಧಿ ಮಹಾತ್ಮ



ನಿನ್ನ ಹುಟ್ಟು ಹಬ್ಬದಂದು
ಅಟ್ಟಹಾಸದಿಂದ ಸಂದು
ಒಟ್ಟುಗೂಡಿ ನಿಂದಿಹೆವು
ಜಯ ಬಾಪು ಎಂದು

ನಿನ್ನ ಒಡಲು ಹಾಲುಗಡಲು
ಲೋಕಕೆಲ್ಲ ಉಣಲು ಬಡಿಸಿ
ಸೀಂಟದೆಮ್ಮ ಮಡಿಲು ಕಲ್ಮಷ
ನಾಡ ನಾಯಕ
ಸನಾತನಿ ಸಂತನಲ್ಲ
ಸಂಪ್ರದಾಯ ಶರಣನಲ್ಲ
ಸತ್ಯಸಂಧ ಪ್ರೇಮ ತವಸಿ
ನಮ್ಮ ಪಾಲಕ
ದೀನ ದಲಿತ ಹೀನ
ಅಬಲ ವೃದ್ಧರೆಲ್ಲರ ರಕ್ಷಕತನು
ಬಾಪು ಲೋಕ ನಾಯಕ

ನಿನ್ನ ಮರಣ ನನ್ನ ಹರಣಕದುವೆ
ಕಿರಣವಾಗಲಿ
ನಿನ್ನ ಬಾಳು ಬಯಕೆಯೆನೆಗೆ ಹರಕೆಯಾಗಲಿ
ದೀನರೆಲ್ಲ ನನ್ನ ಬಳಗವಾಗಲಿ
ಪಾಪಿಯೆನ್ನ ದೇವರಾಗಲಿ
ನಿನ್ನ ಅಮರಜ್ಯೋತಿ ಎನಗೆ ದಾರಿತೋರಲಿ

ಅಮರ ಜ್ಯೋತಿ ಬಾಪೂಜಿ
ನಮ್ಮ ಜ್ಯೋತಿ ಬಾಪೂಜಿ

– ಜಯದೇವಿ ತಾಯಿ ಲಿಗಾಡೆ
(ಕವನಗಳಲ್ಲಿ ಮೂಡಿದ ಗಾಂಧಿ)




**ಪ್ರಿಯ ಬಾಪು,**

ದೇಶವೇ ಮೆಚ್ಚಿಕೊಂಡ, ನೆಚ್ಚಿಕೊಂಡ ಅಪ್ರತಿಮ ದೇಶಾಭಿಮಾನಿಗೆ ವಂದನೆಗಳು. ಭಾರತಕೋಟಿಯ ಹೃದಯಕೋಣೆಯಲ್ಲಿ ನೀವು ಸದಾ ಅಮರರಾಗಿರುತ್ತೀರಿ. ಆದ್ದರಿಂದಲೇ ನನ್ನಂತಹ ಕೋಟಿ ಕೋಟಿ ಮನಸ್ಸುಗಳು ಇಂದಿಗೂ ನಿಮ್ಮನ್ನು ನೆನಪಿಸಿಕೊಳ್ಳುತ್ತಿವೆ.

ಬ್ರಿಟೀಷರ ಗುಂಡಿನೇಟಿನ ಬಿಸಿಯನ್ನು 'ಅಹಿಂಸೆ' ಎನ್ನುವ ಪರಮೋಚ್ಚ ಮಂತ್ರದ ಮೂಲಕ ಎದುರಿಸಿದ ನಿಮ್ಮ ಧೀಶಕ್ತಿಯನ್ನು ನೆನೆಸಿಕೊಂಡಾಗ ಇಂದಿಗೂ ಮೈಮನಸ್ಸು ರೋಮಾಂಚಿತವಾಗುತ್ತದೆ. ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಚುರುಕು ಮುಟ್ಟಿಸಿದ ತುಂಡುಡುಗೆಯ ಸಂತ ನೀವು. ಕಬ್ಬಿಣಕ್ಕಿಂತಲೂ ಕಠಿಣಹೃದಯೀ ಕಟುಕರೆದೆಯಲ್ಲಿಯೂ ಕಾರುಣ್ಯಜಲ ಚಿಮ್ಮಿಸಿದ ನೀವು ಶತಮಾನದ ಅದ್ಭುತ.

ಭಾರತದ ಉದ್ದಗಲದಲ್ಲಿಯೂ ಇಂದು 'ಸ್ವಚ್ಛ ಭಾರತ'ದ ಘೋಷಣೆ ಮೊಳಗುತ್ತಿದೆ. ದೇಶವಾಸಿಗಳು ಭಾರತವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಇದರ ಹಿಂದಿನ ಪ್ರೇರಕಶಕ್ತಿ ನೀವು. ನಾನು ನಿಮ್ಮ ಆತ್ಮಕಥೆ ಓದಿದ್ದೇನೆ, 'ನನ್ನ ಸತ್ಯಾನ್ವೇಷಣೆಯ ಕಥೆ'. ಮನದ ಕಾಮನೆಯ ನಿಯಂತ್ರಣವನ್ನು ಅರಿಯುವುದಕ್ಕೋಸ್ಕರ ಮನದಲ್ಲಿ ಒಂದಿನಿತೂ ಕಲ್ಮಷವನ್ನಿರಿಸಿಕೊಳ್ಳದ ನಿಮ್ಮ ನಡತೆ ಆಶ್ಚರ್ಯ ಹುಟ್ಟಿಸುತ್ತದೆ. ಮನೆಯೊಳಗಿನಿಂದ ಮಾತ್ರವಲ್ಲ, ಮನದೊಳಗಿಂದಲೂ ಕಸವನ್ನು ಕಿತ್ತೊಗೆವ ಈ ನಿಮ್ಮ ಆದರ್ಶ ನಮ್ಮೆಲ್ಲರಲ್ಲಿಯೂ ಚಿರಸ್ಥಾಯಿಯಾಗಲಿ ಎಂಬ ಹಾರೈಕೆ ನನ್ನದು. ಬಹಿರಂಗ ಶುದ್ಧಿಯ ಜೊತೆಗೆ ಅಂತರಂಗ ಶುದ್ಧಿಯನ್ನೂ ಬೋಧಿಸಿದ್ದೀರಿ.

ನಿಮ್ಮ ಮೂಲಕವೇ ರೂಪುಗೊಂಡ ಪಾಕಿಸ್ತಾನದಲ್ಲಿ ಆಶ್ರಯ ಪಡೆದಿದ್ದ ಕೆಲವರು ಪುಲ್ವಾಮಾ ಪ್ರದೇಶದಲ್ಲಿ ಮೋಸದ ದಾಳಿ ನಡೆಸಿ ನಮ್ಮ ದೇಶದ 40 ಮಂದಿ




**ಗಾಂಧೀಜಿಯವರ ಆದರ್ಶಗಳನ್ನು ಅವಲೋಕಿಸಿ ಅದನ್ನು ಅನುಸರಿಸುವ ಕಳಕಳಿ ಇಲ್ಲಿದೆ. ಗಾಂಧಿ ಜಯಂತಿ ಸಂಭ್ರಮದಲ್ಲಿ ಬಾಪೂವಿಗೆ ಒಂದು ಆತ್ಮೀಯ ಪತ್ರ ಇದು. ಓದಿಕೊಳ್ಳಿ...**

**– ವಿಶ್ವನಾಥ ಎನ್. ನೇರಳಕಟ್ಟೆ**

ನಾಗರೀಕರನ್ನು ಹಣಿಯಿತು. ಹೊಸ ಬದುಕಿನ ಕನಸು ಹೊತ್ತು ಬಂದಿದ್ದವ ಶವವಾಗಿ ಮನೆಗೆ ಮರಳುವಂತಾಯಿತು. ಇಂತಹ ಸಂದರ್ಭದಲ್ಲಿ ಪ್ರಪಂಚದ ಬೇರಾವುದೇ ರಾಷ್ಟ್ರವಾದರೂ ವಿವೇಚನೆಯನ್ನು ಕಳೆದುಕೊಳ್ಳುತ್ತಿತ್ತು. ಇದ್ದ ಶಸ್ತ್ರಾಸ್ತ್ರ-ಕ್ಷಿಪಣಿಗಳೆಲ್ಲವನ್ನೂ ಬಳಸಿ ತಪ್ಪಿತಸ್ಥರ ಜೊತೆಗೆ ಸಾಮಾನ್ಯ ನಾಗರಿಕರನ್ನೂ ನಾಶಪಡಿಸುತ್ತಿತ್ತು. ಆದರೆ ಭಾರತ ಅಂತಹ ಕಠಿಣ ಸಂದರ್ಭದಲ್ಲಿಯೂ ತನ್ನ ಮೂಲಗುಣವನ್ನು, ಅಂತಸ್ಸತ್ವವನ್ನು ಮರೆಯಲಿಲ್ಲ. ನೀವು ಬೋಧಿಸಿದ ಶಾಂತಿಮಂತ್ರವನ್ನು ನೆನೆಯಿತು. ತಪ್ಪು ಮಾಡಿದ ಉಗ್ರರ ಶಿಬಿರದ ಮೇಲೆ ದಾಳಿ ನಡೆಸಿ ನೈಜ ತಪ್ಪಿತಸ್ಥರನ್ನು ನಾಶಪಡಿಸಿತು.

# ನೀವು ಅಮರ




ಈ ಮೂಲಕ, ನೀವು ತೋರಿಸಿಕೊಟ್ಟ ಮಾರ್ಗದಲ್ಲಿಯೇ ಭಾರತ ಇನ್ನೂ ನಡೆಯುತ್ತಿದೆ ಎನ್ನುವ ಸಂದೇಶವನ್ನು ಜಗತ್ತಿಗೇ ಸಾರಿಹೇಳಿತು. ಹೌದು ಬಾಪು, ಇಂದಿಗೂ ಭಾರತದ ನಡೆ– ನುಡಿಗಳಲ್ಲಿ ನೀವು ಅಮರರಾಗಿದ್ದೀರಿ.

ಭಾರತದ ಪ್ರತಿಯೊಬ್ಬನ ಬದುಕನ್ನೂ ನಿಮ್ಮ ಸಿದ್ಧಾಂತ, ನೀವು ಬೋಧಿಸಿದ ಮೌಲ್ಯಗಳು ಪ್ರಭಾವಿಸುತ್ತಿವೆ. ನನ್ನದೇ ಉದಾಹರಣೆ ನೀಡುತ್ತೇನೆ. ಸರಳ ಉಡುಗೆಯನ್ನು ಧರಿಸಬೇಕಾಗಿ ಬಂದಾಗ ಮನಸ್ಸು ಹಿಂದೇಟು ಹಾಕುತ್ತದೆ, ಮುಜುಗರ ಅನುಭವಿಸುತ್ತದೆ. ಆದರೆ ನಿಮ್ಮ ಸರಳತೆ ನೆನಪಾದಾಗ ಮನಸ್ಸು ಹೇಳುತ್ತದೆ– 'ಪ್ರಪಂಚವನ್ನೇ ಗೆದ್ದ ಅಂತಹ ಶ್ರೇಷ್ಠ ವ್ಯಕ್ತಿಯೇ ಎರಡು ತುಂಡು ಬಟ್ಟೆ ಹೊದ್ದು ಬದುಕು ನಡೆಸಿರಬೇಕಾದರೆ ನಾನು ಏನು ಮಹಾ?' ಯಾವುದೋ ಕ್ಷುಲ್ಲಕ ಕಾರಣಕ್ಕೆ ಅವಮಾನಕ್ಕೆ ಈಡಾದಾಗ ಮನಸ್ಸು ರೋಷಗೊಳ್ಳುತ್ತದೆ. ದ್ವೇಷ ಸಾಧಿಸುವುದಕ್ಕೆ ಹವಣಿಸುತ್ತದೆ. ಮರುಕ್ಷಣವೇ ಮನಸ್ಸು ಹೇಳುತ್ತದೆ– 'ಅಂತಹ ಗಾಂಧೀಜಿಯಂತಹ ಗಾಂಧೀಜಿಯನ್ನೇ ರೈಲಿನಿಂದ ಹೊರಕ್ಕೆ ತಳ್ಳಿ ಅವಮಾನಿಸಿದ್ದಾರಂತೆ. ಇನ್ನು ನೀನು ಯಾವ ಲೆಕ್ಕ?'

'ವೈರಿಗಳನ್ನು ಗೆಲ್ಲಬೇಕಾದರೆ ಗಟ್ಟಿ ದೇಹ ಇರಬೇಕಾಗಿಲ್ಲ; ಗಟ್ಟಿ ಗುಂಡಿಗೆ ಇದ್ದರೆ ಸಾಕು' ಎನ್ನುವುದಕ್ಕೆ ಅತ್ಯುತ್ತಮ ರೂಪಕ ನೀವು. ಬ್ರಿಟೀಷರಲ್ಲಿ ಬಲಿಷ್ಠವಾದ ಸೇನೆಯಿತ್ತು, ಶಸ್ತ್ರಾಸ್ತ್ರಗಳಿದ್ದವು, ಕ್ಷಿಪ್ರವಾಗಿ ಸಂಪರ್ಕ ಸಾಧಿಸುವ ಸಾಧನಗಳಿದ್ದವು. ಆದರೂ ನಿಮ್ಮೆದುರು ಅವರು ಗೆಲ್ಲಲಿಲ್ಲ. ಕಾರಣ, ನಿಮ್ಮ ಬತ್ತಳಿಕೆಯಲ್ಲಿದ್ದದ್ದು ಸತ್ಯ, ಅಹಿಂಸೆ ಹಾಗೂ ಕೋಟ್ಯಂತರ ಭಾರತೀಯರ ನಿಷ್ಕಲ್ಮಶ ಹಾರೈಕೆ ಎನ್ನುವ ಅಸ್ತ್ರಗಳು. ದೇಶವನ್ನು ಮೆರೆಸಿದ ನಿಮ್ಮನ್ನು ಭಾರತ ಯಾವತ್ತೂ ಮರೆಯಲಿಲ್ಲ, ಮರೆಯುವುದೂ ಇಲ್ಲ. ಏಕೆಂದರೆ, ನೀವು ವೈರಿಗಳನ್ನು ಸೋಲಿಸಿದವರಲ್ಲ; ವೈರಿಗಳನ್ನು ಗೆದ್ದವರು.

ರಾಮರಾಜ್ಯದ ಕನಸು ನಿಮ್ಮದಾಗಿತ್ತು. "ನಡುರಾತ್ರಿಯಲ್ಲಿ ಒಂದಿಷ್ಟೂ ಭಯವಿಲ್ಲದೆ ಮಹಿಳೆಯೊಬ್ಬಳು ನಿರ್ಜನ ರಸ್ತೆಯಲ್ಲಿ ಒಬ್ಬಂಟಿಯಾಗಿ ಚಲಿಸುವಂತಾದರೆ ಭಾರತ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಪಡೆದಂತಾಗುತ್ತದೆ"– ಇದು ನಿಮ್ಮದೇ ಮಾತು. ಆದರೆ ನಿಮ್ಮ ಈ ಮಾತುಗಳು ನೈಜ ಅರ್ಥದಲ್ಲಿ ಇಂದಿಗೂ ಸಾಕಾರಗೊಂಡಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಆದರೆ ಮಹಿಳೆಯರ ಸ್ಥಿತಿಗತಿಗಳಲ್ಲಿ ಗಮನಾರ್ಹ ಬೆಳವಣಿಗೆ ಸಂಭವಿಸಿದೆ ಎನ್ನುವುದು ಸತ್ಯ. ಗಂಡನನ್ನು ಕಳೆದುಕೊಂಡಿದ್ದರೂ ಒಂದಿಷ್ಟೂ ಎದೆಗುಂದದೆ ಮನೆಯನ್ನು ಸಮರ್ಥವಾಗಿ ನಿಭಾಯಿಸುವ ಅಸಂಖ್ಯಾತ ಹೆಣ್ಣುಮಕ್ಕಳು ಈ ದೇಶದಲ್ಲಿದ್ದಾರೆ. ಒಂದು ಕಾಲಘಟ್ಟದಲ್ಲಿ 'ಅಡುಗೆ ಮನೆಯೊಳಗೇ ಬದುಕು ಮುಗಿಸುವ ಹೆಣ್ಣುಮಕ್ಕಳಿಗೆ ಶಿಕ್ಷಣವೆಲ್ಲಾ ಏಕೆ?' ಎಂದು ಸಂಕುಚಿತವಾಗಿ ಯೋಚಿಸುತ್ತಿದ್ದ ಹೆತ್ತವರ ಮನಃಸ್ಥಿತಿ ಇಂದು ಬದಲಾಗಿದೆ. 'ಬೇಟಿ ಬಚಾವೋ, ಬೇಟಿ ಪಡಾವೋ' ಎಂದು ಯೋಚಿಸುವಂತಾಗಿದೆ. ಹೆಣ್ಣುಮಕ್ಕಳೂ ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದಾರೆ. ನೀವು ಕಂಡ ರಾಮರಾಜ್ಯದ ಕನಸು ಖಂಡಿತವಾಗಿಯೂ ನನಸಾಗಲಿದೆ ಎನ್ನುವ ವಿಶ್ವಾಸ ನನಗಿದೆ.

ಹೋರಾಟ, ಜೈಲು, ಉಪವಾಸ, ಬರಹ, ತ್ಯಾಗ– ಅಬ್ಬಬ್ಬಾ! ಬರೆಯುತ್ತಾ ಹೋದರೆ ಎಂದೂ ಮುಗಿಯದಿರುವ ಅಗಣಿತ ಅದ್ಭುತ ನೀವು. ನಿಮ್ಮ ಬದುಕಿನ ರೀತಿ, ನೀತಿ, ಸಿದ್ಧಾಂತಗಳು ಇಂದಿಗೂ ಚಾಲ್ತಿಯಲ್ಲಿರುವುದನ್ನು ಕಂಡಾಗ ನನ್ನ ಮನಸ್ಸು ಹೇಳುತ್ತದೆ– 'ಬಾಪು, ನೀವು ಎಂದೆಂದಿಗೂ ಅಮರ.'



**ಜೈ ಹಿಂದ್. ಜೈ ಭಾರತ್.**

**ಆದರ ಪೂರ್ವಕವಾಗಿ,**

**ತಮ್ಮ ಸಿದ್ಧಾಂತಗಳ ಚಿರ ಪಾಲಕ,**


Health Vision
ವೈದ್ಯಲೋಕ
ಕರ್ನಾಟಕದ ಅತ್ಯಂತ ಜನಪ್ರಿಯ ಹಾಗೂ
ವಿಶ್ವಾಸಾರ್ಹ ಆರೋಗ್ಯ ಮಾಸಪತ್ರಿಕೆಗಳು
ನಿಮ್ಮ ಮನೆಯ ಹೋಂ ಡಾಕ್ಟರ್
ನಿಮ್ಮ ಬ್ರ್ಯಾಂಡ್‌ನ ಮೌಲ್ಯ ಹೆಚ್ಚಿಸಲು ಸೂಕ್ತ ಮಾಧ್ಯಮ ವೇದಿಕೆ
Magazines | Web Portal | YouTube Channel
ಆರೋಗ್ಯ ಕ್ಷೇತ್ರದ ಸಮಗ್ರ ಮಾಹಿತಿ
ನೀಡುವ ವಿಭಿನ್ನ ಮಾಸಪತ್ರಿಕೆ
ವೈದ್ಯಲೋಕ
www.vydyaloka.in
Health Vision
www. healthvision.in
ಇಂದೇ ಚಂದಾದಾರರಾಗಿ | ಜಾಹೀರಾತು ನೀಡಿ ಪ್ರೋತ್ಸಾಹಿಸಿ
WhatsApp / call :
81975 54373
SUBSCRIBE
Press bell icon for notification
YouTube
channel
Youtube: https://www.youtube.com/HealthVisionMag
Youtube: https://www.youtube.com/VydyalokaMag


28 ನೇ ವರ್ಷದ ಮುನ್ನಡೆಯಲ್ಲಿ...
ಅಡ್ವೈಸರ್
ಸಾಹಿತ್ಯಕ್ಕೆ ಮೀಸಲಾದ ಮಾಸ ಪತ್ರಿಕೆ
ಅಡ್ವೈಸರ್ ಪತ್ರಿಕೆಯ ಜಾಹಿರಾತಿನ ಮಾಹಿತಿ
ಜಾಹೀರಾತಿನ ವಿವರ
ರೂ.20,000/-
ರೂ.15,000/-
ರೂ.10,000/-
ರೂ. 5,000/-
ರೂ. 8,000/-
INDIAN BANK, MANDYA.
A/C No. 526332144
IFSC CODE : IDIB000M014
MICR CODE : 571019005
ಜಾಹಿರಾತಿನ ಬಾಬ್ತನ್ನು ಬ್ಯಾಂಕಿನ
ಖಾತೆಗೆ ಜಮಾ ಮಾಡಿ ವಿವರಗಳನ್ನು
ಪತ್ರಿಕೆ ವಿಳಾಸಕ್ಕೆ ಕಳುಹಿಸುವಂತೆ
ಮನವಿ ಮಾಡಿಕೊಳ್ಳುತ್ತಿದ್ದೇವೆ.
Google Pay
PhonePe
7892688670

# ಅಹಿಂಸೆ ದೌರ್ಬಲ್ಯವಲ್ಲ, ಅನಿವಾರ್ಯ

– ಅರವಿಂದ ಚೊಕ್ಕಾಡಿ



**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸೆ ಪ್ರಮುಖ ಅಸ್ತ್ರವಾಗಿತ್ತು. ಅಹಿಂಸೆಯ ಪರಿಕಲ್ಪನೆ ಗಾಂಧೀಜಿ ಅವರ ದೌರ್ಬಲ್ಯ ಆಗಿರದೆ, ವಾಸ್ತವವಾದಿ ನಡೆಯಾಗಿತ್ತು. ಅಜೇಯ ಬ್ರಿಟಿಷ್ ಸಾಮ್ರಾಜ್ಯವನ್ನು ಮಣಿಸುವ ಹಾಗೂ ಸಂಘರ್ಷದಲ್ಲಿ ಭಾರತೀಯರನ್ನು ಭಾರತೀಯರೇ ಕೊಂದುಕೊಳ್ಳುವುದನ್ನು ತಪ್ಪಿಸುವ ದಾರ್ಶನಿಕ ಪ್ರಜ್ಞೆಯಿಂದ ರೂಪುಗೊಂಡಿತ್ತು.**

**ಅಕ್ಟೋಬರ್ 2 ಅಂತಾರಾಷ್ಟ್ರೀಯ ಅಹಿಂಸೆ ದಿನ**

ಬ್ರಿಟಿಷರ ವಿರುದ್ಧ ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ಹೋರಾಟದ ಬದಲು ಸಶಸ್ತ್ರ ಕ್ರಾಂತಿ ನಡೆಸಿದ್ದರೆ ಬೇಗ ಸ್ವಾತಂತ್ರ್ಯ ಸಿಗುತ್ತಿತ್ತು. ಅಹಿಂಸಾತ್ಮಕ ಹೋರಾಟದ ನಿಷ್ಪ್ರಯೋಜಕ' ಎಂಬ ವಾದ ಸರಣಿ ಪ್ರಸ್ತುತ ದಿನಗಳಲ್ಲಿ ಬಹುವಾಗಿ ಚಲಾವಣೆಯಲ್ಲಿದೆ. ಇದನ್ನು ವ್ಯಂಗ್ಯವಾಗಿ, 'ಚರಕದಿಂದ ಸ್ವಾತಂತ್ರ್ಯ ಬರುವುದಿಲ್ಲ; ನೂಲು ಬರುತ್ತದೆ ಅಷ್ಟೆ' ಎಂದೂ ಹೇಳಲಾಗುತ್ತದೆ. ಈ ಎಲ್ಲ ವಾದಗಳ ಉದ್ದೇಶ, ಏನೇ ಇರಲಿ ಈ ಬಗ್ಗೆ ಒಂದು ಐತಿಹಾಸಿಕ ಪರಿಶೀಲನೆಯ ಅಗತ್ಯವಿದೆ.

ಹಿಂಸಾತ್ಮಕ ಹೋರಾಟದಿಂದ ಬ್ರಿಟಿಷರನ್ನು ಮಣಿಸಬಹುದಾಗಿದ್ದ ಸಾಧ್ಯತೆ ಎಷ್ಟು ಎಂದು ಗೊತ್ತಾಗಬೇಕಾದರೆ, ಬ್ರಿಟಿಷರ ಯುದ್ಧ ಇತಿಹಾಸವನ್ನು ನೋಡಬೇಕು. ಕೈಗಾರಿಕಾ ಕ್ರಾಂತಿಯ ನಂತರ ಬ್ರಿಟನ್ ಯಾವ ರೀತಿ ಸೈನಿಕ ಸನ್ನದ್ಧತೆಯನ್ನು ಹೊಂದಿತ್ತು ಎಂದರೆ, ಬ್ರಿಟಿಷ್ ಸೈನ್ಯ ಭಾಗವಹಿಸಿದ್ದ ಯುದ್ಧಗಳಲ್ಲಿ ಅದು ಸೋತದ್ದೇ ಇಲ್ಲ.

ಯುದ್ಧಗಳ ತರುವಾಯ ಐರ್ಲೆಂಡನ್ನು ವಿಭಜಿಸುವುದನ್ನೆಲ್ಲ ಮಾಡಿ, ಡೊಮಿನಿಯನ್ ಸ್ಟೇಟಸ್ ಕೊಟ್ಟು, ಬ್ರಿಟಿಷರು ಐರ್ಲೆಂಡ್ ಅನ್ನು ಬಿಟ್ಟುಕೊಟ್ಟಿದ್ದರು. ಆದರೆ, ಐರ್ಲೆಂಡಿನ ವಿಚಾರದಲ್ಲಿ ನೂರು ವರ್ಷಗಳಿಂದ 'ಹೋಂ ರೂಲ್' ಬೇಡಿಕೆಯ ಚಳವಳಿ ನಡೆದಿತ್ತು. ಹೋರಾಟದ ಹಿಂದೆ ತಾತ್ವಿಕ ಮತ್ತು ವೈಚಾರಿಕ ಸಂಗತಿಗಳಿದ್ದವು. ಹಾಗೆ ನೋಡಿದರೆ, ಭಾರತ ಬ್ರಿಟಿಷರ ಅಧೀನದಲ್ಲಿದ್ದಾಗಲೂ ವೈಚಾರಿಕ ಪ್ರಶ್ನೆಗಳಿಗೆ ಬ್ರಿಟಿಷರು ಸಾಪೇಕ್ಷವಾಗಿ ಸ್ಪಂದಿಸಿದ್ದರು. ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ವಿಧಿಸುತ್ತಿರುವ ತೆರಿಗೆಯ ಅತಿರೇಕವನ್ನು ನೋಡಿ ಕನಲಿದ ಎಡ್ಮಂಡ್ ಬರ್ಕ್, 'ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿರುವುದು ಕ್ರಿಮಿನಲ್ ತೆರಿಗೆ' ಎಂದು ಬ್ರಿಟನ್‌ನ ಸಂಸತ್‌ನಲ್ಲಿ ಸರ್ಕಾರದ ಗಮನ ಸೆಳೆದ ನಂತರ, ಈಸ್ಟ್ ಇಂಡಿಯಾ ಕಂಪನಿಯನ್ನು ನಿಯಂತ್ರಿಸುವ 1773ರ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೆ ಬಂದಿತ್ತು.

ಗಾಂಧೀಜಿ ಹುಟ್ಟುವ ಮೊದಲೇ ಭಾರತದಲ್ಲಿ ನಡೆದ ಸಾವಿರಾರು ಸಶಸ್ತ್ರ ಹೋರಾಟಗಳನ್ನು ಬ್ರಿಟಿಷರು ದಮನಿಸಿದ್ದರು. ಸಾಗರದ ಮೇಲೆ ಪರಮಾಧಿಕಾರವನ್ನು ಸ್ಥಾಪಿಸುವುದಕ್ಕಾಗಿಯೇ ಪೋರ್ಚುಗೀಸರ ಫ್ರಾನ್ಸಿಸ್ಕೊ ಡಿ ಅಲ್ಮೆಡಾ 'ಬ್ಲೂ ವಾಟರ್ ಪಾಲಿಸಿ'ಯನ್ನು 1505ರಲ್ಲಿ ಜಾರಿಗೆ ತಂದಿದ್ದು, ನಂತರದ ಸುಮಾರು ನೂರು ವರ್ಷಗಳ ಕಾಲ ಪೋರ್ಚುಗೀಸರದ್ದೇ ಪರಮಾಧಿಕಾರವಿತ್ತು. ಅಂತಹ ಪೋರ್ಚುಗೀಸರ ಸಾಗರ ಪರಮಾಧಿಕಾರವನ್ನೂ ಬ್ರಿಟಿಷರು ಲೆಕ್ಕಿಸಲಿಲ್ಲ. ಛತ್ರಪತಿ ಶಿವಾಜಿ ಮಹಾರಾಜರ ನೌಕಾದಳ ಪೋರ್ಚುಗೀಸರು ಮತ್ತು ಬ್ರಿಟಿಷರನ್ನು ಕೆಲವು ಪ್ರಕರಣಗಳಲ್ಲಿ ಕರಾವಳಿ ತೀರದಲ್ಲಿ ತಡೆದದ್ದೂ ಇದೆ. ಆದರೆ, ಮಟ್ಟ ಹಾಕಲು ಆಗಲಿಲ್ಲ.



ಗಾಂಧಿ-ಇರ್ವಿನ್ ಒಪ್ಪಂದ

ಭಾರತೀಯರು ಒಗ್ಗಟ್ಟಾಗಿ ಸೇರಿದ್ದರೆ ಬ್ರಿಟಿಷರನ್ನು ಸೋಲಿಸಬಹುದಿತ್ತು ಎಂದು ಊಹಾತ್ಮಕ ತರ್ಕವನ್ನು ಮಾಡಬಹುದು. ಆದರೆ, ಭೂಮಿಯ ಮೇಲೆ ಬ್ರಿಟಿಷರನ್ನು ಸೋಲಿಸಿದರೂ ಬ್ರಿಟಿಷರ ನೌಕಾದಳವನ್ನು ಎದುರಿಸಬಲ್ಲ ನೌಕಾದಳ ಭಾರತದ ಎಲ್ಲ ರಾಜರು ಸೇರಿದಾಗಲೂ ಇತ್ತು ಎನ್ನಲು ಯಾವ ಸಾಕ್ಷಿಯೂ ಸಿಗುವುದಿಲ್ಲ. ಅಂದರೆ, ಸಶಸ್ತ್ರ ಯುದ್ಧದ ಮೂಲಕ ಬ್ರಿಟಿಷರನ್ನು ಬ್ರಿಟನ್ ತನಕ ಹಿಮ್ಮೆಟ್ಟಿಸಲು ಭಾರತದಲ್ಲಿ ವ್ಯವಸ್ಥೆಗಳೇ ಇರಲಿಲ್ಲ. ಬ್ರಿಟನ್ನಿನ ಸೈನಿಕ ಶಕ್ತಿಯ ಇತಿಹಾಸದ ಅರಿವಿದ್ದವರು ಅಹಿಂಸಾತ್ಮಕ ಹೋರಾಟದ ಹೊರತು ಬೇರೆ ಏನನ್ನೂ ಮಾಡಲು ಸಾಧ್ಯವಿರಲಿಲ್ಲ.




ಅಹಿಂಸಾತ್ಮಕ ಹೋರಾಟದ ಎರಡನೆಯ ಅನಿವಾರ್ಯತೆ ಯಾರ ವಿರುದ್ಧ ಹೋರಾಟ ಎಂಬುದನ್ನು ಅವಲಂಬಿಸಿದೆ. ಭಾರತದಲ್ಲಿನ ಬ್ರಿಟಿಷ್ ಸೈನ್ಯದಲ್ಲಿದ್ದ ಸೈನಿಕರು, ಪೊಲೀಸರು ಭಾರತೀಯರೇ ಆಗಿದ್ದರು. ಬ್ರಿಟಿಷ್ ದಳಗಳಿಗೆ ಬ್ರಿಟಿಷರು ಭಾರತೀಯ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದರು. ಸ್ವಾತಂತ್ರ್ಯ ಹೋರಾಟಗಾರರು ಬಾಂಬ್ ದಾಳಿ ನಡೆಸಿದ್ದರೆ, ಬಹುಮಟ್ಟಿಗೆ ಅವರು ಬ್ರಿಟಿಷ್ ಸೇನೆ ಮತ್ತು ಪೊಲೀಸ್ ಇಲಾಖೆಯಲ್ಲಿದ್ದ ಭಾರತೀಯರನ್ನೇ ಕೊಲ್ಲಬೇಕಾದ ಪರಿಸ್ಥಿತಿ ಬರುತ್ತಿತ್ತು. ಗಾಂಧಿಯವರ ಅಹಿಂಸಾತ್ಮಕ ಹೋರಾಟವು ಭಾರತೀಯರು ಭಾರತೀಯರನ್ನೇ ಕೊಲ್ಲುವುದನ್ನು ತಪ್ಪಿಸಿತ್ತು.

ಗಾಂಧಿಯವರ ಅಹಿಂಸೆ ಹೋರಾಟದ ಒಂದು ಅಸ್ತ್ರವಾಗಲು, ಹೋರಾಟ ಯಾರ ವಿರುದ್ಧ ಎನ್ನುವ ಕುರಿತ ಗಾಂಧಿಯವರ ವೈಚಾರಿಕ ಸ್ಪಷ್ಟತೆಯೂ ಕಾರಣವಾಗಿತ್ತು. ಗಾಂಧಿಯವರ ಹೋರಾಟ ಬ್ರಿಟಿಷರ ವಿರುದ್ಧವಾಗಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿತ್ವದ ವಿರುದ್ಧ ಮಾತ್ರವೇ ಆಗಿತ್ತು, ಬ್ರಿಟಿಷರು ಭಾರತೀಯರಾಗಿ ನೆಲಸಿ ಭಾರತೀಯ ಆಡಳಿತವನ್ನು ಸ್ವೀಕರಿಸುವುದಿದ್ದರೆ, ಅದಕ್ಕೆ ಗಾಂಧಿಯವರ ವಿರೋಧ ಇರಲಿಲ್ಲ. ಈ ಧೋರಣೆಯಿಂದಾಗಿ ಬ್ರಿಟಿಷ್ ಪ್ರಭುತ್ವ ಮಾತ್ರ ವಿರೋಧಿಯ ಸ್ಥಾನಕ್ಕೆ ಬಂದಿತು. ಬ್ರಿಟಿಷ್ ಪೌರರು ವಿರೋಧಿಯ ಸ್ಥಾನದಲ್ಲಿರಲಿಲ್ಲ. ಸಾಕಷ್ಟು ಬ್ರಿಟಿಷ್ ಪೌರರು ಗಾಂಧಿಯವರ ಪರ ಇದ್ದರು. ಹಲಗಲಿಯ ಬೇಡರ ದಂಗೆ, ಸಂತಾಲ ದಂಗೆಯಂತಹ ಯಾವುದೇ ಸಶಸ್ತ್ರ ಬಂಡಾಯಗಳಲ್ಲಿ ಬಂಡಾಯವನ್ನು ದಮನಿಸಿದ ನಂತರ ಬ್ರಿಟಿಷ್ ಸರ್ಕಾರ ಬಂಡಾಯಗಾರರ ಬೇಡಿಕೆಗಳನ್ನು ಈಡೇರಿಸಲಿಲ್ಲ. ಆದರೆ, ಚಂಪಾರಣ್ ಸತ್ಯಾಗ್ರಹ, ಬಾರ್ಡೋಲಿ ಸತ್ಯಾಗ್ರಹದಲ್ಲಿ ಸತ್ಯಾಗ್ರಹಿಗಳ ಬೇಡಿಕೆಗಳನ್ನು ಈಡೇರಿಸಲಾಗಿತ್ತು. ಇದು ಅಹಿಂಸಾತ್ಮಕ ಹೋರಾಟದ ಶಕ್ತಿ. ದಕ್ಷಿಣ ಆಫ್ರಿಕಾದಲ್ಲೂ ಗಾಂಧಿ ಬ್ರಿಟಿಷರ ವಿರುದ್ಧ ಅಹಿಂಸಾತ್ಮಕ ಹೋರಾಟವನ್ನು ಯಶಸ್ವಿಗೊಳಿಸಿದ್ದರು. ಉಪ್ಪಿನ ಸತ್ಯಾಗ್ರಹದ ನಂತರ ಗಾಂಧಿ–ಇರ್ವಿನ್ ಒಪ್ಪಂದವೇ ಆಗಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.



ತೆರಿಗೆ ನಿರಾಕರಣಾ ಚಳವಳಿ ಬ್ರಿಟಿಷರ ಬೊಕ್ಕಸಕ್ಕೆ ಹಣ ಹೋಗದಂತೆ ತಡೆಯುವ ಕೆಲಸವನ್ನು ಮಾಡಿತು. ಕ್ವಿಟ್ ಇಂಡಿಯಾ ಚಳವಳಿಯ ನಂತರ ವೈಸರಾಯ್ ವವೆಲ್ ಬ್ರಿಟಿಷ್ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಖಜಾನೆ ಬರಿದಾಗಿರುವುದರ ಪ್ರಸ್ತಾಪವನ್ನೂ ಮಾಡಿದ್ದರು. ಆದ್ದರಿಂದಲೇ ಗಾಂಧಿ ಒಬ್ಬ ಮಹಾನ್ ವಾಸ್ತವವಾದಿ. ಬ್ರಿಟಿಷರನ್ನು ಹೋರಾಟದ ಎದುರಿಸಲು ಅಹಿಂಸಾತ್ಮಕ ಹೊರತು ಅನ್ಯಮಾರ್ಗವಿಲ್ಲ ಎಂಬುದನ್ನು ಕಂಡುಕೊಂಡವರಾಗಿದ್ದರು. ಅಂತಹ ಹೋರಾಟಕ್ಕೆ ಧಾರ್ಮಿಕ ಮತ್ತು ಅಧ್ಯಾತ್ಮದ ತಳಹದಿಯನ್ನು ಒದಗಿಸಿದ್ದರಿಂದ ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಪರಂಪರೆಯ ಶಕ್ತಿ ಮತ್ತು ಉದಾತ್ತತೆಯ ಸ್ವರೂಪವೂ ಬಂದಿತ್ತು.

ಕೃಪೆ : ಪ್ರಜಾವಾಣಿ

ಸ್ಥಾಪನೆ : 1964

# ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಮಲ್ಲೇಶ್ವರಂ, ಬೆಂಗಳೂರು–55

ಶಾಖೆಗಳು: ಮಲ್ಲೇಶ್ವರಂ, ಪಶ್ಚಿಮ ಕಾರ್ಡ್ ರಸ್ತೆ, ಗೋವಿಂದರಾಜನಗರ, ಅಮರಜ್ಯೋತಿನಗರ, ಸಹಕಾರನಗರ, ಹೆಸರಘಟ್ಟ ರಸ್ತೆ, ಸುಂಕದಕಟ್ಟೆ

ಮೊ: 23341972, 23442648, 23449450

Email-jcbankltdblr@gmail.com www.jcbank.in



| ಬ್ಯಾಂಕಿನ ಹಣಕಾಸಿನ ಸ್ಥಿತಿ ದಿ.31.08.2025ರಲ್ಲಿದ್ದಂತೆ | ರೂ.ಕೋಟಿಗಳಲ್ಲಿ |
|---|---|
| ಪಾವತಿಯಾದ ಷೇರು ಬಂಡವಾಳ | 32.90 |
| ನಿಧಿಗಳು ಮತ್ತು ಇತರೆ ಅವಕಾಶಗಳು | 112.32 |
| ಠೇವಣಿಗಳು | 629.59 |
| ಹೂಡಿಕೆಗಳು | 319.18 |
| ಸಾಲ ಮತ್ತು ಮುಂಗಡಗಳು | 431.21 |
| ದುಡಿಯುವ ಬಂಡವಾಳ | 807.46 |
| ಸಿ.ಆರ್.ಎ.ಆರ್ | 21.07% |
| ನಿವ್ವಳ ಲಾಭ(31.03.2025) | 17.54 |

| ವಿವರ | ಪರಿಷ್ಕೃತ ಬಡ್ಡಿ ದರ ದಿನಾಂಕ 18.08.2025ರಿಂದ ಜಾರಿಗೆ ಬರುವಂತೆ | | |
|---|---|---|---|
| | ಸಾಮಾನ್ಯ ವರ್ಗ | ಹಿರಿಯ ನಾಗರೀಕರಿಗೆ | 80 ವರ್ಷ ಹಾಗೂ ಮೇಲ್ಪಟ್ಟ ಹಿರಿಯ ನಾಗರೀಕ ಠೇವಣಿದಾರರಿಗೆ |
| 31 ದಿನಗಳಿಂದ 90 ದಿನಗಳವರೆಗೆ | 4.00% | 4.50% | 4.75% |
| 91 ದಿನಗಳಿಂದ 180 ದಿನಗಳವರೆಗೆ | 4.75% | 5.25% | 5.50 % |
| 181 ದಿನಗಳಿಂದ 365 ದಿನಗಳವರೆಗೆ | 6.25% | 6.75% | 7.00% |
| 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 7.10% | 7.60% | 7.85% |
| 2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ | 6.50% | 7.00% | 7.25% |
| 3 ವರ್ಷದ ಮೇಲ್ಪಟ್ಟು 5 ವರ್ಷಗಳವರೆಗೆ | 7.05% | 7.55% | 7.80% |
| ಉಳಿತಾಯ ಖಾತೆ | 2.50% | 2.50% | 2.50% |

**ಬ್ಯಾಂಕಿನಲ್ಲಿ ದೊರೆಯುವ ಸೌಲಭ್ಯಗಳು:–**

ಬ್ಯಾಂಕಿನ ಎಲ್ಲಾ ಶಾಖೆಗಳು ಗಣಕೀಕೃತಗೊಂಡಿದ್ದು, ಕೋರ್ ಬ್ಯಾಂಕಿಂಗ್, ಆರ್.ಟಿ.ಜಿ.ಎಸ್/ನೆಫ್ಟ್ ಸೌಲಭ್ಯವಿರುತ್ತದೆ.

1. ಭದ್ರತಾ ಕಪಾಟುಗಳು. ಇ–ಕಾಮರ್ಸ್ ವ್ಯವಹಾರಗಳು ಹಾಗೂ ಎ.ಟಿ.ಎಂ. ಸೌಲಭ್ಯವಿರುತ್ತದೆ.
2. ರೂ.5.00 ಲಕ್ಷದವರೆಗಿನ ಠೇವಣಿಗಳು ಡಿ.ಐ.ಸಿ.ಜಿ.ಸಿ ಮುಂಬಯಿ ಇವರಿಂದ ವಿಮೆ ಮಾಡಿಸಲ್ಪಟ್ಟಿದೆ.
3. ಚಿನ್ನಾಭರಣ ಸಾಲ ಸೌಲಭ್ಯವಿರುತ್ತದೆ.

**ಆಡಳಿತ ಮಂಡಳಿ**

ಶ್ರೀ ಮರಿಗೌಡ ಸಿ.ಎಲ್.
ಅಧ್ಯಕ್ಷರು

ಶ್ರೀ ಅರವಿಂದ್ ಬಿ.
ಉಪಾಧ್ಯಕ್ಷರು

| ಆಡಳಿತ ಮಂಡಳಿ ನಿರ್ದೇಶಕರುಗಳು | | |
|---|---|---|
| ಶ್ರೀ ವಿಜಯಕುಮಾರ್ ಸಿ.ಜಿ. | ಶ್ರೀ ಅಶ್ವತ್ಥ್ ಆರ್. | ಶ್ರೀ ರಮೇಶ್ ಪಿ.ಎಸ್. |
| ಶ್ರೀ ರುದ್ರೇಗೌಡ | ಶ್ರೀ ಮುತ್ತಯ್ಯ ಕೆ.ಪಿ. | ಶ್ರೀ ಎಸ್.ಬಿ. ಶಿವಣ್ಣ |
| ಶ್ರೀ ಗೋವಿಂದ ಟಿ. | ಶ್ರೀ ಭೈರಣ್ಣ ಎಂ.ಎಸ್. | ಶ್ರೀ ಪ್ರಕಾಶ್ |
| ಶ್ರೀ ವಿಜಯಸಾರಥಿ ಎಂ.ಎಸ್. | ಶ್ರೀ ಸುರೇಶ್ ಕುಮಾರ್ ಕೆ.ಪಿ. | ಶ್ರೀ ನಿಧಿ ಪಟೇಲ್ ಕೆ |
| ಶ್ರೀಮತಿ ಜಯಲಕ್ಷ್ಮಿ | ಶ್ರೀ ಪ್ರೇಮನಾಥ್ ಎಲ್.ಎನ್. | ಶ್ರೀಮತಿ ಲತಾ. ಎನ್.ಎಸ್ |

**ವೃತ್ತಿಪರ ನಿರ್ದೇಶಕರು**

ಶ್ರೀ ಲಕ್ಷ್ಮಣ ಬಿ.ಎಸ್. ಶ್ರೀ ಬಾಲರಾಜು ಕೆ.ಪಿ.

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು: ಶ್ರೀಮತಿ ವಿನೋದ ಶಿವರಾಮಯ್ಯ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಹೃದಯ ಜ್ಯೋತಿ

## ಹೃದಯಾಘಾತಗಳ ವಿರುದ್ಧದ ಹೋರಾಟ!



- ರಾಜ್ಯಾದ್ಯಂತ ಹೃದಯಾಘಾತದಿಂದ ಸಂಭವಿಸುವ ಸಾವಿನ ಸಂಖ್ಯೆ ಕಡಿಮೆ ಮಾಡಲು ಜಾರಿ ಮಾಡಲಾದ ಮೊದಲ ಕಾರ್ಯಕ್ರಮ
- 2.45 ಲಕ್ಷ ಇಸಿಜಿ ಪರೀಕ್ಷೆ: 3,800+ ಸ್ಟೆಮಿ ಪ್ರಕರಣಗಳ ಪತ್ತೆ
- ಡಿಜಿಟಲ್ ವ್ಯವಸ್ಥೆಯಿಂದ ತ್ವರಿತವಾಗಿ ಕೇವಲ 3.5-5 ನಿಮಿಷದಲ್ಲಿ ರೋಗ ನಿಶ್ಚಯ
- ಗ್ರಾಮೀಣ ಪ್ರದೇಶಗಳು, ಅತಿ ದೂರದ ಪ್ರದೇಶಗಳು ಸೇರಿದಂತೆ ಎಲ್ಲ ಜಿಲ್ಲೆಗಳಲ್ಲಿ ಯೋಜನೆ ವಿಸ್ತರಣೆ
- ಯೋಜನೆಗೆ ಗೌರವಾರ್ಥ ಡಾ|| ಪುನೀತ್ ರಾಜ್‌ಕುಮಾರ್ ಹೆಸರಿಡುವ ಮೂಲಕ ಹೃದಯಕ್ಕೆ ಸಂಬಂಧಿಸಿದ ತುರ್ತು ಕಾಳಜಿಗೆ ಉತ್ತೇಜನ

ಸಕಾಲದ ಕಾಳಜಿ

**ಜೀವಗಳ ಉಳಿವಿಗೆ ನಾಂದಿ**



**ಕರ್ನಾಟಕ ನವ ನಿರ್ಮಾಣಕ್ಕೆ**

# ಗ್ಯಾರಂಟಿ ಸರ್ಕಾರ...

# ಗಾಂಧೀಜಿ–ಒಂದು ದಿನ

**ಆಶ್ರಮದಲ್ಲಿ ಗಾಂಧೀಜಿ ಅವರ ಬದುಕು ಹೇಗಿರುತ್ತಿತ್ತು? ಮೇಲ್ನೋಟಕ್ಕೆ ಸಾಧಾರಣವಾಗಿ ಕಂಡರೂ ಶಿಸ್ತು ಇರುತ್ತಿತ್ತು. ಗಾಂಧೀಜಿಯವರ ದಿನಚರಿಯನ್ನು ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ತಮ್ಮ 'ವರ್ಧಾಯಾತ್ರೆ'ಯಲ್ಲಿ ಕಟ್ಟಿಕೊಟ್ಟಿದ್ದಾರೆ.**



ಆಶ್ರಮದಲ್ಲಿ ಪ್ರಾರ್ಥನೆ ಎರಡು ಸಲ ನಡೆಯುತ್ತದೆ. ಮುಂಜಾನೆ 4–30ಕ್ಕೆ ಒಮ್ಮೆ, ಸಂಜೆ 7ಕ್ಕೆ ಒಮ್ಮೆ. ಆಶ್ರಮದ ಅಂಗಳದಲ್ಲಿ ಎಲ್ಲರೂ ಸೇರುತ್ತಾರೆ. ಹೊರಗಿನವರೂ ಪ್ರಾರ್ಥನೆಯಲ್ಲಿ ಸೇರಬಹುದು. ಅನೇಕರು ಸೇರುವುದೂ ಉಂಟು, ಚಾಪೆಗಳ ಮೇಲೆ ಎಲ್ಲರೂ ಗುಂಪಾಗಿ ಕುಳಿತರೆ ಗಾಂಧೀಜಿ ಬೆನ್ನು ಹಲಗೆಗೆ ಆತುಕೊಂಡು ನಡುವೆ ಕೂತುಕೊಳ್ಳುತ್ತಾರೆ. ಆಶ್ರಮವಾಸಿಗಳಲ್ಲಿ ಯಾರಾದರೊಬ್ಬರು ಪ್ರಾರ್ಥನೆಯನ್ನು ಮೊದಲು ಹೇಳಿ ಉಳಿದವರೆಲ್ಲ ಅವರನ್ನನುಸರಿಸಿ ಹೇಳುತ್ತಾರೆ. ಶ್ಲೋಕ, ಗೀತ, ಭಜನೆ ಗೀತಾ–ಹೀಗೆ ನಾಲ್ಕು ಪ್ರಕಾರವಾಗಿ ನಡೆಯುತ್ತದೆ. ಗೀತೆಯಲ್ಲಿ ಹನ್ನೆರಡನೆಯ ಅಧ್ಯಾಯ ಎಲ್ಲಕ್ಕಿಂತ ತೀರ ಚಿಕ್ಕದು. ಅದರಲ್ಲಿ ಭಕ್ತನ ಲಕ್ಷಣಗಳು ಹೇಳಲ್ಪಟ್ಟಿವೆ. ಗಾಂಧೀಜಿಗೆ ಆ ಅಧ್ಯಾಯ ಬಹಳ ಪ್ರಿಯವಾದುದು. ಎರಡನೆ ಅಧ್ಯಾಯದ ತುದಿಯಲ್ಲಿ ಸ್ಥಿತಪ್ರಜ್ಞನ ಲಕ್ಷಣಗಳು ವರ್ಣಿತವಾಗಿವೆ. ಸ್ಥಿತಪ್ರಜ್ಞ ಎಂದರೆ ಯಾರು. ಅವನ ರೀತಿ ಹೇಗೆ ಎಂದು ಅರ್ಜುನ ಕೇಳುತ್ತಾನೆ. ಅದಕ್ಕೆ ಭಗವಾನ್ ಕೃಷ್ಣ ಉತ್ತರ ಕೊಡುತ್ತ ಮನುಷ್ಯನ ಧ್ಯೆಯವೇನೆಂಬುದನ್ನು ಅದಕ್ಕೆ ಸಾಧನ ಮಾರ್ಗವೇನೆಂಬುದನ್ನು ಹೇಳುತ್ತಾನೆ. ಸದಾಕಾಲಕ್ಕೂ ಸಾಧಕಜೀವಕ್ಕೆ ಅದು ಕೈದೀವಿಗೆಯಂತೆ ಬೆಳಗುತ್ತಿರುತ್ತದೆ. ಆಶ್ರಮದ ದಿನದ ಪ್ರಾರ್ಥನೆಯಲ್ಲಿ ಈ ಅಧ್ಯಾಯಕ್ಕೆ ಬಹಳ ಮಹತ್ವವಿದೆ. ದಿನವೂ ಮಾನವನ ಜೀವನದ ಶ್ರೇಷ್ಠ ಆದರ್ಶವನ್ನು ಅದು ಸ್ಪಷ್ಟವಾಗಿ, ಸ್ಥೂಲವಾಗಿ ಅರ್ಥವಾಗುವಂತೆ ಚಿತ್ರಿಸಿ ಕಣ್ಣ ಮುಂದೆ ನಿಲ್ಲಿಸುತ್ತದೆ. ಗೀತೆಯ ಬಗ್ಗೆ ಗಾಂಧೀಜಿಗೆ ಇರುವ ಅಪಾರ ವಿಶ್ವಾಸಕ್ಕೆ ಇದೊಂದು ಗುರುತು.

ಗಾಂಧೀಜಿ ಪ್ರಾರ್ಥನೆಯಲ್ಲಿ ಮಾತಾಡುವುದಿಲ್ಲ. ಸಾಬರ್ಮತಿಯಲ್ಲಿದ್ದಾಗ ಪ್ರಾರ್ಥನೆಯಾದ ಕೂಡಲೇ ಅವರ ಪ್ರವಚನವಾಗುತ್ತಿತ್ತು. ಸೇವಾಗ್ರಾಮದಲ್ಲಿ ಈಗ ಈ ರೂಢಿಯಿಲ್ಲ. ನಿಜವಾಗಿ ನೋಡಿದರೆ ಸೇವಾಗ್ರಾಮ ಆಶ್ರಮಕ್ಕೂ ಸಾಬರ್ಮತಿಗೂ ಬಹಳ ವ್ಯತ್ಯಾಸವಿದೆ. ಅದು ಒಂದು ಶಿಕ್ಷಣ ಸಂಸ್ಥೆ. ಸತ್ಯಾಗ್ರಹ ಸಿದ್ಧಾಂತವನ್ನು ಆಶ್ರಮವಾಸಿಗಳಿಗೆ ಕಲಿಸುವ ಹೊಣೆಯನ್ನು ಗಾಂಧೀಜಿ ಹೊರುತ್ತಿದ್ದರು. ಅಲ್ಲಿದ್ದವರು ಶಿಕ್ಷಣ ಪಡೆಯುತ್ತಿದ್ದ ಶಿಷ್ಯವೃಂದ. ಇದು ಅವರ ಪರ್ಣಶಾಲೆ. ಅವರಿಗೆ ಅನಿವಾರ್ಯವಾಗಿ ಬೇಕಾದ ನಾಲ್ಕೆಂಟು ಜನ ಮಾತ್ರ ಇಲ್ಲಿ ಇದ್ದಾರೆ. ಪ್ರಾರ್ಥನೆಯಲ್ಲಿ ಎಲ್ಲರ ನಡುವೆ ಕೂತರೂ ಗಾಂಧೀಜಿ ಮೌನವಾಗಿರುತ್ತಾರೆ. ಎಲ್ಲರೊಡನೆ ಶ್ಲೋಕಾದಿಗಳನ್ನು ಹೇಳುವುದಿಲ್ಲ. ಅವರು ಅಲ್ಲಿರುವುದೇ ಪ್ರಾರ್ಥನೆಗೆ ಹರಿದು ಶ್ರುತಿ ಕೊಡುತ್ತದೆ. ಅದನ್ನು ಒಂದು ಮಟ್ಟಕ್ಕೆ ತರುತ್ತದೆ.

ಸಂಜೆಗೆ ತಿರುಗಾಡಿ ಬಂದ ಕೂಡಲೇ ಪಾರ್ಥನೆ, ಪ್ರಾರ್ಥನೆ ಮುಗಿದ ಮೇಲೆ ಆಶ್ರಮದ ಮೇಲ್ವಿಚಾರಣೆ. ಯಾರು ಎಷ್ಟು ಎಷ್ಟು ಕೆಲಸ ಮಾಡಿದರು? ನೂಲುವುದು. ತೋಟದ ಕೆಲಸ ಎಷ್ಟು ನಡೆಯಿತು? ಆಶ್ರಮದಲ್ಲಿ ಎಲ್ಲರೂ ಆರೋಗ್ಯವೆ? ಎಲ್ಲಾ ಸಣ್ಣ ಪುಟ್ಟ ಮಾತುಗಳನ್ನೂ ವಿಚಾರಿಸುತ್ತಾರೆ. ಆಶ್ರಮವಾಸಿಗಳಲ್ಲಿ ಯಾರಾದರೂ ಬೇನೆ ಬಿದ್ದರೆ ಗಾಂಧೀಜಿಗೆ ಬಹಳ ಚಿಂತೆ. ತಾವೇ ಉಪಚಾರಕ್ಕೆ ನಿಲ್ಲುತ್ತಾರೆ. ಪ್ರಾರ್ಥನೆಯ ತರುವಾಯ ರೋಗಿಗಳ ಬಳಿ ಹೋಗಿ





**'ರಾಮಧುನ್'– ರಘುಪತಿ ರಾಜಾರಾಮ ಎಂದು ಹೆಸರಾದ ರಾಮ ಭಜನೆ–ಕೂಡಾ ಪ್ರಾರ್ಥನೆಯಲ್ಲಿ ಮುಖ್ಯವಾದುದು. ಏಕಕಂಠದಿಂದ ಎಲ್ಲರೂ ರಾಮಭಜನೆ ಹಾಡುತ್ತಿರುವಾಗ ಮನಸ್ಸಿಗೆ ಒಂದು ಬಗೆಯ ಅಪೂರ್ವ ಆನಂದವಾಗುತ್ತದೆ.**

ಕುಳಿತು ಅವರನ್ನು ಉಲ್ಲಾಸಗೊಳಿಸುತ್ತಾರೆ. ಆಶ್ರಮದಲ್ಲಿ ಸಣ್ಣದೊಂದು ಔಷಧಾಲಯವಿದೆ. ಡಾ. ಸುಶೀಲಾ ನಾಯರ್ ಅದನ್ನು ನೋಡಿಕೊಳ್ಳುತ್ತಾರೆ.

ಇಷ್ಟೆಲ್ಲಾ ಆಗುವ ಹೊತ್ತಿಗೆ 9 ಘಂಟೆ. ಅದು ಗಾಂಧೀಜಿ ಮಲಗುವ ಹೊತ್ತು. ಗಾಂಧೀಜಿ ರಾತ್ರಿ ಬೇಗನೆ ಮಲಗುತ್ತಾರೆ. 30–40 ವರ್ಷಗಳಿಂದ ಅವರಿಗೆ ಈ ರೂಢಿ ಇದೆ. ಬೆಳಿಗ್ಗೆ 4ಕ್ಕೆ ಏಳುತ್ತಾರೆ. ಗಾಂಧೀಜಿಯ ಮೇಲ್ವಿಚಾರಣೆಗೆ ಒಳಪಟ್ಟ ಎಲ್ಲಾ ಸಂಸ್ಥೆಗಳಲ್ಲೂ ಇದೊಂದು ನಿಯಮವಾಗಿದೆ.

ಅರುಣೋದಯಕ್ಕೆ ಮೊದಲೇ ಏಳುವುದು ಅವರಿಗೆ ಮುಖ್ಯವಾದ ಒಂದು ಜೀವನ ಧರ್ಮ. ಈ ಮುದಿತನದಲ್ಲಿ ಅವರಿಗಿರುವ ಕಾರ್ಯಕಲಾಪಗಳ ನಡುವೆಯೂ ಅವರ ಆರೋಗ್ಯ ಈಗಿರುವಷ್ಟು ಚೆನ್ನಾಗಿರಲು ಈ ಅಭ್ಯಾಸವೂ ಒಂದು ಕಾರಣವೆಂದು ಸುಲಭವಾಗಿ ತಿಳಿಯಬಹುದಾಗಿದೆ.

ಗಾಂಧೀಜಿಯ ಪರ್ಣಕುಟಿಗೆ ಬಲಮಗ್ಗುಲಿನಲ್ಲಿ ಚಪ್ಪರವಿದೆ. ಮಳೆಗಾಲದಲ್ಲಿ ಗಾಂಧೀಜಿ ಆ ಚಪ್ಪರದ ಕೆಳಗೆ ಮಲಗುತ್ತಾರೆ. ಒಂದು ಸಾಮಾನ್ಯವಾದ ಹೊರಸು ಅವರ ಶಯ್ಯಾಸಾಧನ. ಮಳೆಯಿಲ್ಲದಿದ್ದರೆ ಕುಟೀರದ ಮುಂದಿನ ಬಯಲಿನಲ್ಲಿ ನಕ್ಷತ್ರಗಳ ಬೆಳಕಿನಲ್ಲೇ ಮಲಗುತ್ತಾರೆ. ಬ್ರಹ್ಮಚರ್ಯ, ಆರೋಗ್ಯಗಳಿಗೆ ಈ ಪದ್ಧತಿ ಗಾಂಧೀಜಿಗೆ ಬಹಳ ನೆರವಾಗಿರಬೇಕು. ಇದರಿಂದ ಗುಪ್ತಚಾರರ ಭಯ, ಸಾಮಾಜಿಕ ಕುಹಕಿಗಳ ಗೊಂದಲ ತಪ್ಪಿತು. ಗಾಂಧೀಜಿಯ ಜೀವನವು ಸರಳವಾಯಿತು, ಎಂದಿದ್ದಾರೆ ಮಹದೇವ ದೇಸಾಯಿ.

# ಗಾಂಧೀಜಿ–



ಮುಂಜಾನೆ 4 ಗಂಟೆಗೆ ಆಶ್ರಮದಲ್ಲಿ ಎಲ್ಲರೂ ಏಳುತ್ತಾರೆ. ಮೋರೆ ತೊಳೆದು–ಕೊಂಡು ಎಲ್ಲರೂ ಪ್ರಾರ್ಥನೆಗಾಗಿ ಅಂಗಳದಲ್ಲಿ ಸೇರುತ್ತಾರೆ. ಒಮ್ಮೊಮ್ಮೆ ರಾತ್ರಿ ಇನ್ನೂ ಮುಂಚೆಯೇ ಎದ್ದು ಗಾಂಧೀಜೀ ಪತ್ರವ್ಯವಹಾರವನ್ನು ನೋಡಿಕೊಳ್ಳುವುದುಂಟು. ಅರ್ಧ ಗಂಟೆ ಪ್ರಾರ್ಥನೆ ಮುಗಿದ ಮೇಲೆ ಪಾತ್ರರ್ವಿಧಿ: ಪ್ರಾತರ್ವಿಧಿಯಾದ ಮೇಲೆ ಮುಂಜಾನೆಯ ಗಾಳಿ ಸವಾರಿ. ಮುಂಜಾನೆ ಆಶ್ರಮದ ಜನವಲ್ಲದೆ ಬೇರೆ ಯಾರೂ ಇರುವುದಿಲ್ಲ. ವರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೇರಿದಾಗ ಹೊರಗಿನಿಂದ ಹೆಸರಾದ ಪತ್ರಿಕೆಗಳ ಸುದ್ದಿಗಾರರು ಬರುತ್ತಾರೆ. ಅವರಲ್ಲಿ ಒಬ್ಬರಿಬ್ಬರು ಮುಂಜಾನೆ ಸೇವಾಗ್ರಾಮಕ್ಕೆ ಹೋಗಿ ಪ್ರಾರ್ಥನೆಯಲ್ಲಿ ಸೇರಿ, ಗಾಂಧೀಜಿಯ ಜೊತೆಯಲ್ಲಿ ಆಡ್ಡಾಡುತ್ತ ವರ್ಧಾಕ್ಕೆ ಹಿಂದಿರುಗುತ್ತಾರೆ.



ಅಲ್ಲಿಗೆ 6–30 ಗಂಟೆಯಾಗುತ್ತದೆ. ಅದು ಗಾಂಧೀಜಿಗೆ ಬೆಳಗಿನ ಉಪಹಾರದ ಸಮಯ. ಸಂಜೆಯಂತೆಯೇ ಮುಂಜಾನೆ. ಅದೇ ಆಹಾರ. ಮಧ್ಯಾಹ್ನ 11 ಗಂಟೆಗೆ ಮತ್ತೊಮ್ಮೆ ಆಹಾರ ತೆಗೆದುಕೊಳ್ಳುತ್ತಾರೆ. ಆಗಲೂ ಅದೇ. ಕಸ್ತೂರಿಬಾ ಸ್ವಯಂ ಕೂತು ಭೋಜನ ಮಾಡಿಸುತ್ತಾರೆ. ಅವರು ಊರಲ್ಲಿರದಿದ್ದರೆ ಮೀರಾಬಾಯಿಯ ಕೆಲಸ ಅದು.

ಊಟವಾದ ಮೇಲೆ ಪ್ಯಾರೆಲಾಲರ ಪ್ರವೇಶ, ಅವರ ಹಿಂದೆಯೆ ಗುಡಿಸಲು ತುಂಬ ಕಾಗದ ಪತ್ರಗಳು ಬಂದುಬಿಡುತ್ತವೆ. ಹಿಂದಿನ ದಿನದ ಪತ್ರಿಕೆಗಳಲ್ಲಿ ಬಂದ ಅಗ್ರ ಲೇಖನಗಳನ್ನು ಓದಿ ತೋರಿಸುತ್ತಾರೆ. ಹಿಂದುಸ್ಥಾನದ ಅಥವಾ ಅಂತರ್ಜಾತೀಯ ರಾಜಕಾರಣಕ್ಕೆ ಸಂಬಂಧಪಟ್ಟವಾದರೆ ಓದುವುದು. ಇಲ್ಲವಾದರೆ ಇಲ್ಲ. ಎಲ್ಲ ಪತ್ರಿಕೆಗಳಿಗಿಂತ ಮುಖ್ಯವಾದ ಸ್ಥಾನ ಟೈಮ್ಸ್ ಆಫ್ ಇಂಡಿಯಾಕ್ಕೆ. ವಿರೋಧಪಕ್ಷದ ವಿಮರ್ಶೆಯನ್ನು ತಿಳಿಯಲು ಗಾಂಧೀಜೀ ಬಹಳ ಕುತೂಹಲ ತೋರಿಸುತ್ತಾರೆ.

ಪತ್ರಿಕೆಗಳಿಂದ ಪತ್ರವ್ಯವಹಾರಕ್ಕೆ ಸಾಗುತ್ತದೆ ದಿನಚರಿ. ಭಾರತದ ಎಲ್ಲ ಮೂಲೆಗಳಿಂದಲೂ ಕಾಗದಗಳು ಬರುತ್ತವೆ. ಸಂದರ್ಶನಕ್ಕೆ ಬರುವ ಜನರಲ್ಲಿ ಎಷ್ಟು ವೈವಿಧ್ಯವೋ ಇದರಲ್ಲೂ ಅಷ್ಟೇ. ಆತ್ಮೀಯ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ–ಎಲ್ಲ ತರದ ಜನರೂ ಪತ್ರ ಬರೆಯುತ್ತಾರೆ. ಒಂದು ಕಡೆ ಧರ್ಮಸಂದೇಹ ಪರಿಹರಿಸಬೇಕು, ಇನ್ನೊಂದರಲ್ಲಿ ಕಾಂಗ್ರೆಸ್ಸಿನ ಅಧಿಕಾರಿಗಳ, ಮಂತ್ರಿಗಳ ಲೋಪಗಳನ್ನು ವಿಚಾರಣೆ

# ಒಂದು ದಿನ



ಮಾಡಬೇಕು. ವರ್ಧಾ ವಿಧಾನದ ಬಗ್ಗೆ ಆಕ್ಷೇಪಗಳ ಪತ್ರಗಳೂ ಬರುತ್ತವೆ. ಹರಿಜನರಲ್ಲಿ ಬಂದ ಅವರ ಲೇಖನಗಳ ವಿಮರ್ಶೆ. ಸಂಸ್ಥಾನಗಳಲ್ಲಿ ಅತ್ಯಾಚಾರದ ವರದಿ. ನಡುನಡುವೆ ಆತ್ಮೀಯ ಸಮಸ್ಯೆಗಳು. ಪತ್ರಗಳದೊಂದು ಗುಡ್ಡೆಯೇ ಬೀಳುತ್ತದೆ ಪ್ರತಿದಿನ. ಅದೊಂದು ಸಂತೆ ನೆರಸಿದಹಾಗೆ.

ಅನೇಕ ಪತ್ರಗಳಿಗೆ ಉತ್ತರವನ್ನು ಕೂಡಲೇ ಬರೆದಿಡುತ್ತಾರೆ. ಕೆಲವು ಪತ್ರಗಳನ್ನು ಆಯಾ ಜನರಿಗೆ ಕಳಿಸಿಕೊಡುತ್ತಾರೆ. ವರ್ಧಾ ಶಿಕ್ಷಣದ ಬಗ್ಗೆ ಇದ್ದರೆ ಅದು ಆಯಾ ನಾಯಕರ ಬಳಿಗೆ. ಗ್ರಾಮೋದ್ಯೋಗದ ವಿಷಯವಾದರೆ ಕುಮಾರಪ್ಪನವರಿಗೆ ಹೀಗೆ ಹೊರೆಯನ್ನು ಎಷ್ಟೇ ಕಡಮೆ ಮಾಡಿದರೂ ದಿನದಿನದ ಪತ್ರವ್ಯವಹಾರವನ್ನು ಆಯಾ ದಿನವೇ ಮುಗಿಸುವುದಾಗದು, ಪ್ಯಾರೆಲಾಲರು ಓದುತ್ತಿದ್ದರೆ ಗಾಂಧೀಜೀ ನೂಲುತ್ತಾ ಕೇಳುತ್ತಾರೆ. ಇಲ್ಲವೆ ಸಾಮಾನ್ಯ ಪತ್ರಗಳ ಉತ್ತರ ಬರೆಯುತ್ತಾರೆ. ಊಟ ನಡೆದಾಗಲೂ ಈ ಕೆಲಸ ನಡೆದಿರುತ್ತದೆ.

10 ಗಂಟೆಯ ಹೊತ್ತಿಗೆ ಬಚ್ಚಲು ಮನೆಯ ಕಡೆಗೆ ಹೋಗುತ್ತಾರೆ. ಗಾಂಧೀಜಿಯ ಸ್ನಾನವೊಂದು ದೊಡ್ಡ ಅಧ್ಯಾಯ. ಜರ್ಮನಿಯ ಕೂನ್ ಸಾಹೇಬನ



ಜಲೌಷಧಿಯನ್ನು ನಂಬಿದಾಗಿನಿಂದ ಅವರು ತೊಟ್ಟಿಯ ಸ್ನಾನವನ್ನು ಅವಲಂಬಿಸಿದ್ದಾರೆ. ತೊಟ್ಟಿಯಲ್ಲಿ ಸುಖವಾಗಿ ಮಲಗಿಬಿಡುತ್ತಾರೆ.

ಭಾನುವಾರ, ಸೋಮವಾರ ಗಾಂಧೀಜಿಯ ದಿನಚರಿಯಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ. ಭಾನುವಾರ ಬೆಳಿಗ್ಗೆ, ಅನುಕೂಲವಾದರೆ ಮಧ್ಯಾಹ್ನ "ಹರಿಜನ" ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಾರೆ. ಅತ್ಯಗತ್ಯವಲ್ಲದಿದ್ದರೆ ಭಾನುವಾರ ಭೇಟಿಗಳಿಗೆ ಅವಕಾಶವಿಲ್ಲ. ಸೋಮವಾರವೆಲ್ಲ ಮೌನದಲ್ಲೇ ಹೋಗುತ್ತದೆ.

ಇದೇ ಹಾದಿಯಲ್ಲಿ ಒಮ್ಮೆ ಗಾಂಧೀಜಿಯ ವಿಚಿತ್ರ ಪ್ರಯೋಗವೊಂದು ನಡೆಯಿತು. ವಚೋನಿಗ್ರಹದಂತೆ ದೃಷ್ಟಿನಿಗ್ರಹದ ಪ್ರಯತ್ನ ಮಾಡಿದರು. ಇಪ್ಪತ್ತು ನಾಲ್ಕು ತಾಸೂ ಕಣ್ಣುಮುಚ್ಚಿಕೊಂಡು ಬಿಡುವುದು. ಹುಟ್ಟು ಕುರುಡನಂತೆ ಬಾಳು ಸಾಗಿಸಿದರು. ಕೆಲವು ದಿನ ಆಶ್ರಮವಾಸಿಗಳಿಗೆಲ್ಲ ಗಾಬರಿಯಾಯಿತು. ದಿನಚರಿಯಲ್ಲಿ ಯಾವುದನ್ನೂ ಬದಲು ಮಾಡಲಿಲ್ಲ. ಯಥಾಕ್ರಮವಾಗಿ ಎಲ್ಲಾ ನಡೆಯಿತು. ಸಂಭಾಷಣೆಗಳು, ಪತ್ರವ್ಯವಹಾರ ಎಲ್ಲವೂ ನಡೆದವು. ಕಾಗದ ಓದಿಸಿ ಕೇಳಿ ಉತ್ತರ ಬರೆಸಿದರು. ಸಂದರ್ಶನಗಳಲ್ಲಿ ಕಣ್ಣುಮುಚ್ಚಿಕೊಂಡೇ ಬಂದವರೊಡನೆ ಮಾತಾಡಿದರು. ಓಡಾಡಬೇಕಾದರೆ ಯಾರಾದರೂ ಕೈಹಿಡಿದು ಕರೆದೊಯ್ಯಬೇಕು. ಅಲ್ಲಿದ್ದವರೆಲ್ಲ ಇದೇನು ಹುಚ್ಚು ಎಂದರು. ಮಹಾದೇವ ದೇಸಾಯಿ ಆಗ ಕಲಕತ್ತೆಗೆ ಹೋಗಬೇಕಾಗಿತ್ತು. ಕೆಲವು ವಾರಗಳವರೆಗೆ ಬರುವ ಹಾಗಿರಲಿಲ್ಲ ಕಣ್ಣು ತೆರೆದು ನನ್ನನ್ನು ನೋಡುವವರೆಗೆ ನಾನು ಊರಿಗೆ ಹೋಗುವುದಿಲ್ಲ ಎಂದರು. ಕೊನೆಗೆ ಅವರನ್ನೊಮ್ಮೆ ನೋಡಿದ ಮೇಲೆ ಮತ್ತೆ ಕತ್ತಲಿಗೆ ಶರಣುಹೋಗುವ ಕರಾರಿನ ಮೇಲೆ ಗಾಂಧೀಜೀ ಕಣ್ಣೆರೆದರು. 2–3 ದಿನವಾದ ಮೇಲೆ ಆ ವ್ರತವನ್ನು ಬಿಟ್ಟರು. ಇದುವರೆಗೆ ಎರಡನೆಯ ಸಲ ಈ ಪ್ರಯೋಗವಾಗಲಿಲ್ಲ. ಮನಸ್ಸನ್ನು ಅಂತರ್ಮುಖಿಯಾಗಿ ಮಾಡಲು ಇದೂ ಒಂದು ಸಾಧನವೆಂದು ಗಾಂಧೀಜೀ ಪ್ರಯತ್ನಿಸಿದಂತೆ ಕಾಣುತ್ತದೆ.

**ಗಾಂಧೀಜಿ ಆಹಾರದ ಪ್ರಯೋಗಗಳನ್ನೂ ಮಾಡಿದ್ದರು. ಒಮ್ಮೆ ಇವರು ಕಲಕತ್ತೆಗೆ ಹೋಗಿದ್ದಾಗ ಭೂಪೇಂದ್ರನಾಥ ಬಸುವಿನ ಅತಿಥಿಗಳಾಗಿದ್ದರು. ಅವರು ಅಪಾರ ಪ್ರೇಮದಿಂದ ಪಕ್ವಾನ್ನಗಳನ್ನು ಮಾಡಿಸಿ. ಊರಿನಲ್ಲಿದ್ದ ಎಲ್ಲಾ ಜಾತಿಯ ಹಣ್ಣು ಹಂಪಲನ್ನು ತರಿಸಿದರು. ಇದೆಲ್ಲವನ್ನು ನೋಡಿ ಗಾಂಧೀಜಿಗೆ ಧರ್ಮಸಂಕಟಕ್ಕೆ ಬಂತು. ಈ ಆತಿಥ್ಯದ ಹೊರೆಯನ್ನು ಹೊರುವುದು ಹೇಗೆ? ಕೊನೆಗೆ ಅಂದೇ ಒಂದು ವ್ರತವನ್ನು ಹಿಡಿದರು. ಒಂದು ದಿನದಲ್ಲಿ ಐದು ಪದಾರ್ಥಗಳಿಗಿಂತ ಹೆಚ್ಚು ತಿನ್ನುವಹಾಗಿಲ್ಲ. ಅದರಿಂದ ಅವರ ಆರೋಗ್ಯ ಪಾಲನೆಗೆ ಮುಂದೆ ಬಹಳ ಸಹಾಯವಾಯಿತು.**

ಸ್ಥಾಪನೆ:1907

## ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
**ಕಛೇರಿ ☎:** 26678572 : 26600512 : 26609066 : 9342781424
ಅಧ್ಯಕ್ಷರು : 26606377 : ಪ್ರಧಾನ ವ್ಯವಸ್ಥಾಪಕರು : 26617980 : ಟೆಲಿಫ್ಯಾಕ್ಸ್ : (080) 26617980
E-mail : info@bccbl.co.in : Web : bccbl.co.in

**: ಶಾಖೆಗಳು ಮತ್ತು ದೂರವಾಣಿ ಸಂಖ್ಯೆಗಳು :**

| | | | | | |
|---|---|---|---|---|---|
| 1 | ಪ್ರಧಾನ ಕಛೇರಿ | 26672751 /9342781401 | 12 | ಆರ್.ಟಿ.ನಗರ | 23650122 / 9342781412 |
| 2 | ವಿಜಯನಗರ | 23302005 /9342781402 | 13 | ಜ್ಞಾನಜ್ಯೋತಿನಗರ | 23240023 / 9342781413 |
| 3 | ಜಯನಗರ 9ನೇ ಬ್ಲಾಕ್ | 22442389 / 9342781403 | 14 | ಹೆಚ್.ಆರ್.ಬಿ.ಆರ್.ಲೇಔಟ್ | 65765581 / 9342781414 |
| 4 | ಇಂದಿರಾನಗರ | 25250194 / 9342781404 | 15 | ಕೃಷ್ಣರಾಜಪುರಂ | 25610409 / 9342781415 |
| 5 | ಚಾಮರಾಜಪೇಟೆ ಪಶ್ಚಿಮ | 26707349 / 9342781405 | 16 | ರಾಮನಗರ ಟೌನ್ | 27271173 / 9342781416 |
| 6 | ಶಾಂತಿನಗರ | 22219211 / 9342781406 | 17 | ಟಿ.ದಾಸರಹಳ್ಳಿ | 28390222 / 9342781417 |
| 7 | ಮಹಾಲಕ್ಷ್ಮೀಪುರ | 23491120 / 9342781407 | 18 | ಕುವೆಂಪುನಗರ(ಮೈಸೂರು) | 0821-2490163 / 9342781418 |
| 8 | ಸಂಜಯನಗರ | 23414135 / 9342781408 | 19 | ಹೊಸೂರು ರಸ್ತೆ ಎಲೆಕ್ಟ್ರಾನಿಕ್ ಸಿಟಿ | 25744442 / 9342781419 |
| 9 | ಪದ್ಮನಾಭನಗರ | 26890199 / 9342781409 | 20 | ಯಲಹಂಕ | 28561898 / 9342781420 |
| 10 | ಕೋರಮಂಗಲ | 25522721 / 9342781410 | 21 | ಅಂಜನಾನಗರ | 23288889 / 9342781421 |
| 11 | ಆವಲಹಳ್ಳಿ | 26420357 / 9342781411 | 22 | ಕೋಣನಕುಂಟೆ ಶಾಖೆ | 26321022 / 9342781422 |

**ದಿನಾಂಕ : 31–03–2025 ರಲ್ಲಿದ್ದಂತೆ ಬ್ಯಾಂಕಿನ ಆರ್ಥಿಕ ಸ್ಥಿತಿ**

(ರೂ. ಕೋಟಿಗಳಲ್ಲಿ)

| | | | |
|---|---|---|---|
| 1. | ಷೇರು ಬಂಡವಾಳ | ರೂ. | **95.94** |
| 2. | ಆಪದ್ಧನ ಮತ್ತು ಇತರೆ ನಿಧಿಗಳು | ರೂ. | **525.49** |
| 3. | ಠೇವಣಾತಿಗಳು | ರೂ. | **2158.88** |
| 4. | ದುಡಿಯುವ ಬಂಡವಾಳ | ರೂ. | **2780.31** |
| 5. | ಸಾಲಗಳು ಮತ್ತು ಮುಂಗಡಗಳು | ರೂ. | **1381.52** |
| 6. | ಗುಂತಾಯಗಳು | ರೂ. | **1235.08** |
| 7. | ನಿವ್ವಳ ಲಾಭ | ರೂ. | **28.78** |
| 8. | Net NPA | | **0%** |

**ನಮ್ಮ ಗುರಿ ಗ್ರಾಹಕರ ಸಂತೃಪ್ತಿ ಸೇವೆಗೆ ವೈಯಕ್ತಿಕ ಗಮನ**

- ಕರ್ನಾಟಕ ರಾಜ್ಯ ಸರ್ಕಾರದಿಂದ 2001–02, 2003–04 ಮತ್ತು 2007–08 ನೇ ಸಾಲಿನಲ್ಲಿ **"ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕು"** ಎಂಬ ಪ್ರಶಸ್ತಿ ಪಡೆದಿದೆ.
- ತ್ವರಿತ ಬ್ಯಾಂಕಿಂಗ್ ಸೇವೆಗಾಗಿ **"ಕೋರ್ ಬ್ಯಾಂಕಿಂಗ್ ಸೌಲಭ್ಯ"** ಅಳವಡಿಸಲಾಗಿದ್ದು NEFT/RTGS ಹಾಗೂ ATM ನ್ನು Rupay ಸಹಯೋಗದೊಂದಿಗೆ ನಿರ್ವಹಿಸಲಾಗುತ್ತಿದೆ.
- ದೇಶದ ಉತ್ತಮ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿದೆ.
- ಠೇವಣಿಗಳು ಡಿಪಾಸಿಟ್ ಇನ್ಶ್ಯೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್ ಆಫ್ ಇಂಡಿಯಾ, ಮುಂಬಯಿರವರಿಂದ ವಿಮೆಗೊಳಪಟ್ಟಿವೆ.
- ಠೇವಣಿಗಳ ಮೇಲೆ ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ.
- ಅವಧಿ ಠೇವಣಿಗಳಿಗೆ ಪ್ರತಿ ತಿಂಗಳ ಬಡ್ಡಿ ಪಾವತಿಗೆ ಯಾವುದೇ ಕಡಿತವಿಲ್ಲ.
- ಶೇಕಡ 1 ರಷ್ಟು ಹೆಚ್ಚಿನ ದರದಲ್ಲಿ ಅವಧಿ ಠೇವಣಿಯ ಶೇಕಡ 90 ರಷ್ಟು ಸಾಲಗಳನ್ನು ತಕ್ಷಣವೇ ಮಂಜೂರು ಮಾಡಲಾಗುತ್ತದೆ.
- ಎಲ್ಲಾ ಶಾಖೆಗಳಲ್ಲಿ ಸುಭದ್ರ ಕಪಾಟುಗಳ ಸೌಲಭ್ಯ ಕಲ್ಪಿಸಲಾಗಿದೆ.
- ಡಿಮ್ಯಾಂಡ್ ಡ್ರಾಫ್ಟ್ (ನಿಗದಿತ ಸ್ಥಳಗಳಿಗೆ) ಮತ್ತು ಪೇ ಆರ್ಡರ್‌ಗಳನ್ನು ಅತೀ ಕಡಿಮೆ ಕಮೀಷನ್ ದರದಲ್ಲಿ ನೀಡಲಾಗುತ್ತದೆ.

**ಡಾ॥ ದೇವರಾಜ್.ಟಿ.ಎಂ**
**ಉಪಾಧ್ಯಕ್ಷರು**

: ನಿರ್ದೇಶಕರುಗಳು :

**ಆವಲಹಳ್ಳಿ ಚಂದ್ರಪ್ಪ. ಆರ್**
**ಅಧ್ಯಕ್ಷರು**

| | | |
|---|---|---|
| ಶ್ರೀ.ಆಂಜನಪ್ಪ | ಶ್ರೀ.ಸುರೇಶ್ ಕೆ.ಪಿ | ಕುಮಾರಿ.ಮೀನಾಕುಮಾರಿ ಕೆ.ಪಿ |
| ಶ್ರೀ.ಕೃಷ್ಣಪ್ಪ ಕೆ | ಶ್ರೀ.ವೆಂಕಟೇಶ್ | ಶ್ರೀ.ಶಿವಣ್ಣ.ಕೆ |
| ಶ್ರೀ.ಚಿಕ್ಕಣ್ಣಯ್ಯ ಕೆ.ಸಿ | ಶ್ರೀ.ಹನುಮಂತಪ್ಪ ಟಿ.ವಿ | ಶ್ರೀ.ಯತೀಶ್.ಬಿ |
| ಶ್ರೀಮತಿ.ಪಂಕಜ ಹನುಮಂತಯ್ಯ | ಶ್ರೀ.ಬಸವರಾಜು | **ಮಂಜುನಾಥ.ಪಿ** |
| ಶ್ರೀ.ರಾಧಕೃಷ್ಣ ಎನ್ | ಶ್ರೀ.ನಾರಾಯಣಪ್ಪ ಬಿ.ಆರ್ | **ಪ್ರಧಾನ ವ್ಯವಸ್ಥಾಪಕರು (ಪ್ರಭಾರ)** |
| ಶ್ರೀ.ರಘುನಾಥ್ ಸಿ | ಶ್ರೀಮತಿ.ಅಶ್ವಿನಿ ಸತೀಶ್ | |



# ಬಾಪು ಬಾಣಂತಿ ಸೇವೆ!



ಇಲ್ಲಿಯವರೆಗೆ

**ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಮಕ್ಕಳ ಶಿಕ್ಷಣದ ಚಿಂತೆ ಉಂಟಾಯಿತು. ಅವರು ನಾನಾ ಪ್ರಯೋಗಗಳನ್ನು ಮಾಡಿದರು. ಅವೆಲ್ಲಾ ಅಪೂರ್ಣವಾದವು. ಮಕ್ಕಳಿಗೆ ಹೆಚ್ಚು ಸಮಯ ವಿನಿಯೋಗಿಸಲಾಗಲಿಲ್ಲ ಎನ್ನುವ ಅತೃಪ್ತಿ ಇತ್ತು. ಮುಂದೆ ಓದಿ...**

**– ಗೊರೂರು ರಾಮಸ್ವಾಮಿ ಅಯ್ಯಂಗಾರ್**

ನನ್ನ ವಕೀಲಿ ವೃತ್ತಿ ಚೆನ್ನಾಗಿ ನಡೆಯುತ್ತಿತ್ತು. ಆದರೆ ಅದರಿಂದ ತೃಪ್ತಿಯುಂಟಾಗಲಿಲ್ಲ. ನನ್ನ ಜೀವನವನ್ನು ಇನ್ನೂ ಹೆಚ್ಚು ಸರಳ ಮಾಡಕೊಳ್ಳಬೇಕು, ಜನರಿಗೆ ಏನಾದರೂ ಸ್ಪಷ್ಟವಾದ ಇನ್ನೂ ಹೆಚ್ಚು ಶಾರೀರಿಕ ಕ್ರಮದಿಂದ ಸೇವೆ ಮಾಡಬೇಕು ಎಂದು ನನ್ನ ಮನಸ್ಸಿನಲ್ಲಿ ಮಥನವಾಗುತ್ತಿತ್ತು. ಆಗ ನನ್ನ ಬಾಗಿಲಿಗೆ ಒಬ್ಬ ಕುಷ್ಠರೋಗಿ ಬಂದ. ಒಂದು ಊಟವನ್ನು ಹಾಕಿ ಅವನನ್ನು ಕಳುಹಿಸಿಬಿಡುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಆದುದರಿಂದ ನಾನು ಅವನನ್ನು ಒಂದು ಕೊಠಡಿಯಲ್ಲಿ ಮಲಗಿಸಿ ಗಾಯಗಳಿಗೆ ಔಷಧಿ ಹಾಕಿ ಶುಶ್ರೂಷೆ ಮಾಡಿದೆ. ಆದರೆ ಬಹಳ ದಿನಗಳು ನಾನು ಹೀಗೆ ಮಾಡುವುದು ಸಾಧ್ಯವಿರಲಿಲ್ಲ. ನನಗೆ ಅದಕ್ಕೆ ಬೇಕಾದ ಅನುಕೂಲವಿರಲಿಲ್ಲ. ಯಾವಾಗಲೂ ನನ್ನ ಜತೆಯಲ್ಲಿಯೇ ಅವನನ್ನು ಇಟ್ಟುಕೊಂಡಿರಲು ನನಗೆ ದೃಢನಿರ್ಧಾರವೂ ಇರಲಿಲ್ಲ. ಆದುದರಿಂದ ಆತನನ್ನು ನಾನು ಕರಾರು ಕೂಲಿಗಳ ವೈದ್ಯಶಾಲೆಗೆ ಕಳುಹಿಸಿಕೊಟ್ಟೆ.

ಆದರೆ ಇದರಿಂದ ನನಗೆ ತೃಪ್ತಿಯಾಗಲಿಲ್ಲ. ಸೇವೆ ಮತ್ತು ಶುಶ್ರೂಷೆಯ ಯಾವುದಾದರೂ ಕಾರ್ಯದಲ್ಲಿ ಯಾವಾಗಲೂ ತೊಡಗಿರಬೇಕೆಂಬುದು ನನ್ನ ಇಷ್ಟವಾಗಿತ್ತು. ಡಾ.ಬೂತ್‌ರು ಸಂತ ಐಡಾನ್ ಮಿಷನ್ನಿನ ಅಧ್ಯಕ್ಷರಾಗಿದ್ದರು. ಅವರು ದಯಾಶಾಲಿಗಳು: ರೋಗಿಗಳಿಗೆ, ಹಣ ತೆಗೆದುಕೊಳ್ಳದೆ ಚಿಕಿತ್ಸೆ ಮಾಡುತ್ತಿದ್ದರು. ಅವರು ರುಸ್ತುಂಜೀಯವರ ದಾನ ದ್ರವ್ಯದಿಂದ, ತಮ್ಮದೇ ಮೇಲ್ವಿಚಾರಣೆಯಲ್ಲಿ ಒಂದು ಸಣ್ಣ ವೈದ್ಯಶಾಲೆಯನ್ನು ಧರ್ಮಾರ್ಥವಾಗಿ ತೆರೆದರು.

ಈ ವೈದ್ಯ ಶಾಲೆಯಲ್ಲಿ ರೋಗಿಗಳ ಶುಶ್ರೂಷೆಯ (ನರ್ಸ್) ಕೆಲಸದಲ್ಲಿ ತೊಡಗಬೇಕೆಂಬುದು ನನ್ನ ತೀವ್ರ ಇಚ್ಛೆಯಾಗಿತ್ತು. ಔಷಧಿಗಳನ್ನು ಕೊಡುವುದು ದಿನಕ್ಕೆ ಒಂದು ಎರಡು ಗಂಟೆಗಳ ಕಾಲ ಮಾತ್ರ ಹಿಡಿಯುವ ಕೆಲಸವಾಗಿತ್ತು. ಕಾಂಪೌಂಡರ್‌ನಿಗೆ ಬದಲಾಗಿ, ನನ್ನ ಆಫೀಸಿನ ವೇಳೆಯಿಂದ ಆ ಕಾಲವನ್ನು ಮಿಗಿಸಿ ಈ ಕೆಲಸಕ್ಕೆ ವಿನಿಯೋಗಿಸಬೇಕೆಂದು ನಾನು ನಿಶ್ಚಯಿಸಿದೆ. ನನ್ನ ವಕೀಲ ವೃತ್ತಿಯ ಬಹುಭಾಗದ ಕೆಲಸ, ಆಫೀಸಿನಲ್ಲಿಯೇ ಕುಳಿತುಕೊಂಡು ಕಕ್ಷಿಗಾರರೊಂದಿಗೆ ಸಮಾಲೋಚನೆ ಮಾಡುವುದು, ಕಾಗದ ಪತ್ರಗಳನ್ನು ಬರೆಯುವುದು, ಪಂಚಾಯಿತಿಯ ಕೆಲಸ ಇವೇ ಆಗಿದ್ದವು. ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಸಂಬಂಧಪಟ್ಟ ಕೆಲವು ಮೊಕದ್ದಮೆಗಳೇನೋ ನನಗೆ ಬರುತ್ತಿದ್ದವು. ಅವುಗಳು ಬಹಳಮಟ್ಟಿಗೆ ಕ್ಲಿಷ್ಟವಲ್ಲದ ಮೊಕದ್ದಮೆಗಳು. ನನ್ನೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಬಂದು ನನ್ನ ಜತೆಯಲ್ಲಿಯೇ ಆಗ ವಾಸಿಸುತ್ತಿದ್ದ ಮಿ. ಖಾನ್‌ರು, ನಾನು ಇಲ್ಲದ ವೇಳೆಯಲ್ಲಿ ಆ ಮೊಕದ್ದಮೆಗಳನ್ನು ಕೋರ್ಟಿನಲ್ಲಿ ನೋಡಿಕೊಳ್ಳುವುದಾಗಿ ಒಪ್ಪಿಕೊಂಡರು. ಹೀಗೆ ವೈದ್ಯಶಾಲೆಯಲ್ಲಿ ಸೇವೆ ಸಲ್ಲಿಸಲು ನನಗೆ ಕಾಲ ದೊರಕಿತು. ಪ್ರತಿದಿನವೂ ಸುಮಾರು ಎರಡು ಗಂಟೆಗಳ ಕಾಲ ಮೀಸಲಾಗಿದ್ದ ಈ ಕಾರ್ಯದಿಂದ ನನ್ನ



ಮನಸ್ಸಿಗೆ ಸ್ವಲ್ಪ ಶಾಂತಿಯುಂಟಾಯಿತು. ರೋಗಿಯ ರೋಗದ ವಿಷಯಗಳನ್ನು ತಿಳಿದುಕೊಳ್ಳುವುದು, ಅದನ್ನೆಲ್ಲ ವೈದ್ಯರಿಗೆ ಹೇಳುವುದು, ಔಷಧಗಳನ್ನು ಸಿದ್ಧಪಡಿಸಿ ಕೊಡುವುದು ಇದು ನನ್ನ ಕೆಲಸವಾಗಿತ್ತು. ಇದರಿಂದ ನರಳುತ್ತಿದ್ದ ಕರಾರು ಕೂಲಿಗಳಿಗೂ ನನಗೂ ನಿಕಟ ಪರಿಚಯವುಂಟಾಯಿತು. ಆ ಕೂಲಿಗಳೆಲ್ಲ ಹೆಚ್ಚಾಗಿ ತಮಿಳರು, ತೆಲುಗರು ಮತ್ತು ಉತ್ತರ ಭಾರತದವರೇ ಆಗಿದ್ದರು.

ಬೋಯರ್ ಯುದ್ಧದ ಕಾಲದಲ್ಲಿ ಗಾಯಗೊಂಡ ಮತ್ತು ರೋಗಿಗಳಾದ ಸಿಪಾಯಿಗಳಿಗೆ ಶುಶ್ರೂಷೆ ಮಾಡಲು ಮುಂದಾಳಾದಾಗ, ಈ ಅನುಭವದಿಂದ ನನಗೆ ತುಂಬಾ ಪ್ರಯೋಜನವಾಯಿತು.

ಬಾಲಕರ ಪೋಷಣೆಯ ವಿಷಯ ಯಾವಾಗಲೂ ನನ್ನ ಮನಸ್ಸಿನಲ್ಲಿ ಇದ್ದೇ ಇತ್ತು. ನನಗೆ ದಕ್ಷಿಣ ಆಫ್ರಿಕಾದಲ್ಲಿ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ವೈದ್ಯಶಾಲೆಯಲ್ಲಿ ನನಗೆ ದೊರೆತ ಅನುಭವದಿಂದ ಅವರ ಲಾಲನೆ ಪೋಷಣೆಯ ವಿಷಯದಲ್ಲಿ ನನಗೆ ಬಹಳ ಸಹಾಯವಾಯಿತು. ನನ್ನ ಸ್ವತಂತ್ರ ಸ್ವಭಾವವೇ ನನಗೆ ಯಾವಾಗಲೂ ಕಷ್ಟವನ್ನು ಕೊಡುತ್ತಿತ್ತು. ನನ್ನ ಹೆಂಡತಿಯ ಪ್ರಸವದ ಕಾಲದಲ್ಲಿ ಅತ್ಯುತ್ತಮವಾದ ವೈದ್ಯಕೀಯ ಸಹಾಯವನ್ನು ಪಡೆಯಬೇಕೆಂಬುದೇ ನನ್ನ ಮತ್ತು ಅವಳ ಇಚ್ಛೆಯಾಗಿತ್ತು. ಆದರೆ ವೈದ್ಯರೂ ದಾದಿಯೂ (ನರ್ಸ್) ನಮ್ಮನ್ನು ನಡು ನೀರಿನಲ್ಲಿ ಕೈಬಿಟ್ಟರೆ ನಮ್ಮ ಗತಿಯೇನು? ಸೂಲಗಿತ್ತಿ ಭಾರತೀಯಳೇ ಆಗಿರಬೇಕಾಗಿತ್ತು. ಭಾರತದಲ್ಲೇ ಸುಶಿಕ್ಷಿತ ಸೂಲಗಿತ್ತಿ ದೊರೆಯುವುದು ಕಷ್ಟವೆಂದ ಮೇಲೆ ದಕ್ಷಿಣ ಆಫ್ರಿಕಾದಲ್ಲಿ ಶಿಕ್ಷಣ ಪಡೆದ ಸೂಲಗಿತ್ತಿ ದೊರೆಯುವುದು ದುಸ್ತರವೆಂದು ಬೇರೇ ಹೇಳಬೇಕೇ? ಆದುದರಿಂದ ಸುಖಪ್ರಸವಕ್ಕೆ ಏನೇನು ಆಗಬೇಕು ಎಂಬುದನ್ನೆಲ್ಲ ನಾನು ಅಧ್ಯಯನ ಮಾಡಿದೆ. ತ್ರಿಭುವನದಾಸರು ಬರೆದಿದ್ದ ಮಾ.ನೇ ಶಿಖಾಮಣ್ (ತಾಯಿಗೆ ಶಿಕ್ಷಣ) ಎಂಬ ಗ್ರಂಥವನ್ನು ನಾನು ವ್ಯಾಸಂಗ ಮಾಡಿದೆ. ಇತರ ಕಡೆಗಳಲ್ಲಿ ನನಗೆ ದೊರಕಿದ್ದ ಅನುಭವಗಳನ್ನೂ ಸೇರಿಸಿಕೊಂಡು, ಆ ಪುಸ್ತಕದಲ್ಲಿ ಹೇಳಿದ್ದ ಸಲಹೆಗನುಗುಣವಾಗಿ ನನ್ನ ಎರಡು ಮಕ್ಕಳನ್ನೂ ನಾನೇ ಪೋಷಿಸಿದೆ. ದಾದಿಯ ಸೇವೆಯನ್ನೂ



ಒಂದು ಸಲಕ್ಕೆ ಎರಡು ತಿಂಗಳಿಗೆ ಹೆಚ್ಚಿಲ್ಲದಂತೆ ಉಪಯೋಗಿಸಿಕೊಂಡೆವು. ದಾದಿಯ ಕೆಲಸ ಮುಖ್ಯವಾಗಿ ನನ್ನ ಹೆಂಡತಿಯ ಶುಶ್ರೂಷೆಯಾಗಿದ್ದಿತೆ ಹೊರತು ಮಕ್ಕಳನ್ನು ನೋಡಿಕೊಳ್ಳುವುದಲ್ಲ. ಮಕ್ಕಳಗೆ ನೀರು ಹಾಕುವುದು, ಸ್ವಚ್ಛ ಮಾಡುವುದು ಈ ಕಾರ್ಯವನ್ನು ನಾನೇ ಮಾಡುತ್ತಿದ್ದೆ.

ಕೊನೆಯ ಮಗುವಿನ ಜನನ ಸಮಯದಲ್ಲಿ ನನಗೆ ಅತ್ಯಂತ ಕಠಿಣವಾದ ಪರೀಕ್ಷೆಯೊದಗಿತು. ಪ್ರಸವವೇದನೆ ಇದ್ದಕ್ಕಿದ್ದಂತೆಯೇ ಮೊದಲಾಯಿತು. ವೈದ್ಯರು ತತ್‌ಕ್ಷಣ ಸಿಕ್ಕಲಿಲ್ಲ. ಸೂಲಗಿತ್ತಿಯನ್ನು ಕರೆದುಕೊಂಡು ಬರುವುದರಲ್ಲಿ ಸ್ವಲ್ಪ ಕಾಲ ಕಳೆದುಹೋಯಿತು. ಅವಳು ತತ್‌ಕ್ಷಣವೇ ಬಂದಿದ್ದರೂ ಆಕೆಯೇನೂ ಪ್ರಸವದಲ್ಲಿ ಸಹಾಯ ಮಾಡುವಂತಿರಲಿಲ್ಲ. ಸುಖಪ್ರಸವಕ್ಕಾಗಿ ಮಾಡಬೇಕಾದ ಕಾರ್ಯಗಳನ್ನೆಲ್ಲ ನಾನೇ ಮಾಡಬೇಕಾಯಿತು. ಡಾ. ತ್ರಿಭುವನದಾಸರು ತಮ್ಮ ಪುಸ್ತಕದಲ್ಲಿ ಬರೆದಿದ್ದ ವಿಷಯಗಳನ್ನು ನಾನು ಲಕ್ಷ್ಯವಿಟ್ಟು ಓದಿದ್ದುದರಿಂದ ನನಗೆ ಅಮೂಲ್ಯವಾದ ಸಹಾಯವಾಯಿತು. ಆದುದರಿಂದ ನನಗೇನೂ ಭಯವಿರಲಿಲ್ಲ.

ಮಕ್ಕಳನ್ನು ಸರಿಯಾಗಿ ಲಾಲನೆ ಪೋಷಣೆ ಮಾಡಲು, ತಂದೆ ತಾಯಿಗಳಿಬ್ಬರಿಗೂ ಶಿಶುರಕ್ಷಣೆ ಪೋಷಣೆಯ ಸಾಮಾನ್ಯ ಜ್ಞಾನವಿರಬೇಕೆಂಬುದು ನನಗೆ ಚೆನ್ನಾಗಿ ಮನದಟ್ಟಾಗಿದೆ. ನಾನು ಈ ವಿಷಯವನ್ನು ಚೆನ್ನಾಗಿ ವ್ಯಾಸಂಗ ಮಾಡಿದುದರಿಂದ ಹೆಜ್ಜೆ ಹೆಜ್ಜೆಗೂ ಪ್ರಯೋಜನವಾದುದು ನನಗೆ ಗೊತ್ತಾಗಿದೆ. ನಾನು ಈ ವಿಷಯವನ್ನು ಚೆನ್ನಾಗಿ ಅಭ್ಯಾಸಮಾಡಿ, ಅದನ್ನು ಕಾರ್ಯರೂಪಕ್ಕೆ ತರದೇ ಹೋಗಿದ್ದರೆ ನನ್ನ ಮಕ್ಕಳಿಗೆ ಇಂದು ಇರುವ ಆರೋಗ್ಯಭಾಗ್ಯ ಇರುತ್ತಿರಲಿಲ್ಲ. ಮಗು ಪ್ರಾರಂಭದ ಐದು ವರ್ಷಗಳಲ್ಲಿ, ಕಲಿಯಬೇಕಾದುದು ಏನೂ ಇಲ್ಲವೆಂಬ ಮೂಢನಂಬಿಕೆಗೆ ನಾವು ಗುರಿಯಾಗಿದ್ದೇವೆ. ಆದರೆ ನಿಜವಾದ ವಿಷಯವೇನೆಂದರೆ ಮಗು ಪ್ರಾರಂಭದ ಐದು ವರ್ಷಗಳಲ್ಲಿ ಕಲಿಯುವುದನ್ನು ಅಲ್ಲಿಂದ ಮುಂದೆ ತನ್ನ ಜೀವಮಾನದಲ್ಲಿ ಮತ್ತೆಂದೂ ಕಲಿಯುವುದಿಲ್ಲ. ಗರ್ಭಧಾರಣೆಯೊಂದಿಗೆ ಮಗುವಿನ ಶಿಕ್ಷಣ ಪ್ರಾರಂಭವಾಗುವುದೆಂಬುದನ್ನು ನಾನು ಅನುಭವದಿಂದ ಹೇಳುತ್ತೇನೆ. ಗರ್ಭಧಾರಣೆಯ ಸಮಯದಲ್ಲಿ ಮಾತಾಪಿತೃಗಳಿಗಿರುವ ದೈಹಿಕ ಮತ್ತು ಮಾನಸಿಕ ಸ್ಥಿತಿಯು ಮಗುವಿನಲ್ಲಿ ಪುನರಂಕುರಿಸುತ್ತದೆ. ಅನಂತರ ಗರ್ಭ ಬೆಳೆಯುತ್ತಾ ಹೋದಂತೆ ತಾಯಿಯ ಮನೋಧರ್ಮ, ಬಯಕೆ, ಸ್ವಭಾವ, ಆಹಾರ, ವಿಹಾರ ಮತ್ತು ಜೀವನಕ್ರಮವನ್ನು ಅನುಸರಿಸಿ ಮಗು ಬೆಳೆಯುತ್ತದೆ. ಹುಟ್ಟಿದ ಮೇಲೆ ಮಗು ತಾಯಿ ತಂದೆಯರನ್ನು ಅನುಕರಿಸುತ್ತದೆ. ಅನಂತರ ಅನೇಕ ವರ್ಷಗಳವರೆಗೆ ತನ್ನ ವಿಕಾಸಕ್ಕೆ ತಂದೆ ತಾಯಿಯರನ್ನೇ ಪೂರ್ಣವಾಗಿ ಅವಲಂಬಿಸುತ್ತದೆ.

(ಇನ್ನೂ ಇದೆ)

## ನಂದಿ ವಾಹಿನಿ ಯೂಟ್ಯೂಬ್ ಚಾನೆಲ್ ಸ್ಟುಡಿಯೋಗೆ ಆಗಮಿಸಿದ ಗಣ್ಯಮಾನ್ಯರು











## ಅಮರ ಬಾಪು ಚಿಂತನ ಗಣ್ಯರಿಗೆ ಸಮರ್ಪಣೆ

























ಅಮರ ಬಾಪು ಚಿಂತನ ಪತ್ರಿಕೆಯ ಸಂಪಾದಕರಾದ

ಜೀರಿಗೆ ಲೋಕೇಶ್ ರವರ ಸಾರಥ್ಯದಲ್ಲಿ ಮೂಡಿಬರುತ್ತಿರುವ

# ನಂದಿ ವಾಹಿನಿ ಯೂಟ್ಯೂಬ್ ಚಾನಲ್

## ಸದಭಿರುಚಿಯ ಮತ್ತೊಂದು ಹೆಸರು!

## Nandi Vahini Youtube Channel

Subscribe

Scan QR Code

ಲೋಕಾರ್ಪಣೆ
17 ಜನವರಿ
2025

| | | |
|---|---|---|
| 3,65,000 Views | 5000 Subscribers | 23,000+ Watch hours |
















ನಂದಿ ವಾಹಿನಿ
ಮನರಂಜನೆಯ ಮನೆ
NANDI VAHINI
PRODUCTION HOUSE

nandivahini1@gmail.com
www.facebook.com/Nandi Vahini
X.com/@NandiVahini
www.nandivahini.com
www.instagram.com/nandivahini

No.88, Jeerige Building,11th Cross, Sampige Road, Malleshwaram, Bangalore-560003, Mob: 94480 42653 | 90190 87050

# ನಂದಿ ವಾಹಿನಿಯಲ್ಲಿ ಕಾರ್ಯಕ್ರಮ ಪ್ರಸ್ತುತ ಪಡಿಸಿದ ಖ್ಯಾತ ಕಲಾವಿದರು




















# ಗುರುದೇವ ಮತ್ತು ಗಾಂಧೀಜಿ



**ಗಾಂಧೀಜಿಯು ಶಾಂತಿನಿಕೇತನಕ್ಕೆ 1945ರಲ್ಲಿ ತಮ್ಮ ಕೊನೆಯ ಭೇಟಿಯನ್ನಿತ್ತಾಗ "ನನ್ನ ಮತ್ತು ಗುರುದೇವರ ಮಧ್ಯದಲ್ಲಿ ಯಾವ ಭಿನ್ನಾಭಿಪ್ರಾಯಗಳಿವೆಯೆಂದು ಸಂಶೋಧಿಸಿದಾಗ ಕೊನೆಯಲ್ಲಿ ಏನೂ ಇಲ್ಲವೆಂದು ಕಂಡು ಬಂದಿತು" ಎಂಬ ಹೇಳಿಕೆಯೊಂದನ್ನು ಕೊಟ್ಟರು. ಅವರಿಬ್ಬರ ಮೈತ್ರಿ ಅವಿನಾಭಾವ ಅದರತ್ತ ಬೆಳಕು ಚೆಲ್ಲೋಣ... ಗಾಂಧಿ ಸ್ಮಾರಕ ನಿಧಿ ಪ್ರಕಟಿಸಿರುವ ಪುಸ್ತಕದಿಂದ ಆಯ್ದ ಭಾಗ...**

ಗಾಂಧೀಜಿ ಮತ್ತು ಗುರುದೇವರ ಬಗ್ಗೆ ನೆಹರೂ ಬರೆದಿರುವುದರಿಂದಲೇ ಇವರಿಬ್ಬರ ಶ್ರೇಷ್ಠತೆ ಅರ್ಥವಾಗುತ್ತದೆ.

ವಿಶ್ವದ ವಿವಿಧ ಭಾಗಗಳಲ್ಲಿಯ ಅನೇಕ ವಿಭೂತಿಗಳನ್ನು ನಾನು ಭೆಟ್ಟಿಯಾಗಿದ್ದೇನೆ. ಆದರೆ ನಿಸ್ಸಂದೇಹವಾಗಿಯೂ ಅವರೆಲ್ಲರಕಿಂತಲೂ ಮಹಾ ವ್ಯಕ್ತಿಗಳೆನಿಸಿದ ಗಾಂಧಿ ಹಾಗು ಠಾಕೂರರನ್ನು ಭೆಟ್ಟಿಯಾಗುವ ಯೋಗವನ್ನು ನನ್ನ ಸೌಭಾಗ್ಯವೆಂದು ನಾನು ತಿಳಿಯುತ್ತೇನೆ. ಈ ಕಾಲು ಶತಮಾನದಲ್ಲಿ ಇವರೀರ್ವರು ಜಗತ್ತಿನ ಪ್ರಮುಖ ವ್ಯಕ್ತಿಗಳೆಂದು ನನಗನಿಸುತ್ತಿದೆ. ದಿನಗಳುರುಳಿದಂತೆ ನಿರಂಕುಶಾಧಿಕಾರಿಗಳು, ಸರ್ವಾಧಿಕಾರಿಗಳು, ಗೊಂದಲವೆಬ್ಬಿಸುವ ರಾಜಕಾರಣಿಗಳು ಕಣ್ಮರೆಯಾಗಿ ನೆನಪಿನಿಂದ ಅಳಿಸಿ ಹೋದಾಗ, ಇವರು ನಿಜವಾದ ಮಹಾತ್ಮರೆಂದು ಜಗತ್ತು ಗುರುತಿಸಬಲ್ಲದು.



ಸದ್ಯದ ದಾರುಣ ಪರಿಸ್ಥಿತಿಯಲ್ಲಿ ಅಥವಾ ಆ ದಾರುಣ ಪರಿಸ್ಥಿತಿಯ ಮೂಲಕವಾಗಿಯೋ ಏನೋ, ಭಾರತವು ಒಂದೇ ತಲೆಮಾರಿನಲ್ಲಿ ಇಬ್ಬರು ಮಹಾ ಪುರುಷರನ್ನು ಹುಟ್ಟಿಸಿದ್ದು ನನಗೆ ಅಚ್ಚರಿಯನ್ನುಂಟು ಮಾಡುತ್ತದೆ. 'ಇದು ಭಾರತದ ಅಗಾಧ ಅಂತಃಸತ್ವದ ಬಗ್ಗೆ ನನಗೆ ಮನವರಿಕೆ ಮಾಡಿಕೊಟ್ಟು, ಭವಿಷ್ಯದ ಬಗ್ಗೆ ಆಸೆಯನ್ನು ಹುಟ್ಟಿಸುತ್ತದೆ.



# ಗುರುದೇವ

ಇನ್ನೊಂದು ಸಂಗತಿ ನನಗೆ ಸದಾ ಆಶ್ಚರ್ಯವನ್ನುಂಟು ಮಾಡುತ್ತದೆ. ಗುರುದೇವ ಹಾಗು ಗಾಂಧೀಜಿ, ಅದರಲ್ಲಿಯೂ ಗುರುದೇವರು ಪಾಶ್ಚಿಮಾತ್ಯ ಮತ್ತು ಬೇರೆ ದೇಶಗಳಿಂದ ಸಾಕಷ್ಟು ಪಡೆದರು. ಇವರಿಬ್ಬರೂ ಸಂಕುಚಿತ ಮನೋಭಾವನೆಯ ರಾಷ್ಟ್ರೀಯರಾಗಿರಲಿಲ್ಲ. ಅವರ ಸಂದೇಶ ಸಮಗ್ರ ವಿಶ್ವಕ್ಕಿತ್ತು. ಹಾಗಿದ್ದರೂ ಅವರು ನೂರಕ್ಕೆ ನೂರರಷ್ಟು ಭಾರತಮಾತೆಯ ಮಕ್ಕಳಾಗಿದ್ದರು. ಅಲ್ಲದೆ ಅವರು ಭಾರತಮಾತೆಯ ಶತ-ಶತಮಾನಗಳ ಸಂಸ್ಕೃತಿಯ ಉತ್ತರಾಧಿಕಾರಿಗಳಾಗಿ ಪ್ರತಿನಿಧಿಗಳಾಗಿ ಮತ್ತು ಪ್ರಕಾಶಕರಾಗಿ ಇದ್ದರು. ಅವರಲ್ಲಿ ವಿಶಾಲಜ್ಞಾನ ಹಾಗೂ ಸಂಸ್ಕೃತಿಗಳು ಇದ್ದರೂ, ಭಾರತೀಯರೇ ಆಗಿದ್ದರು. ಒಂದೇ ಭೂಮಿಯ ಸೆಲೆಯಿಂದ ಅವರಿಬ್ಬರೂ ಜ್ಞಾನ, ವಿಚಾರ ಮತ್ತು ಸಂಸ್ಕೃತಿಗಳ ಸ್ಫೂರ್ತಿ ಪಡೆದು ಒಂದೇ ಆಗಿದ್ದರೂ, ಅವರಿಬ್ಬರೂ ಭಿನ್ನ ಭಿನ್ನರಾಗಿದ್ದಾರೆ. ಗಾಂಧಿ ಹಾಗು ಠಾಕೂರರಷ್ಟು ತಮ್ಮ ಪ್ರತಿಪಾದನೆ ಅಥವಾ ಪ್ರಕೃತಿಗಳಲ್ಲಿ ಭಿನ್ನರಾಗಿದ್ದಷ್ಟು ಬಹುಶಃ ಬೇರಾವ ಎರಡು ವ್ಯಕ್ತಿಗಳೂ ಇದ್ದಿರಲಾರರು.

ಅವರಿಬ್ಬರ ಮಧ್ಯದಲ್ಲಿಯ ಸಾಮ್ಯ ವೈಷಮ್ಯಗಳು ತುಂಬಾ ಮನೋರಂಜಕವಾಗಿವೆ. ಶ್ರೀಮಂತ ಕಲಾವಿದರಾದ ಠಾಕೂರರು ಬಡಜನತೆಯ ಬಗ್ಗೆ ಸಹಾನುಭೂತಿಯುಳ್ಳ, ಪ್ರಜಾಪ್ರಭುತ್ವವಾದಿಯಾಗಿ ಪರಿವರ್ತನೆ ಹೊಂದಿ, ಜೀವನವನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿ, ಸಂಗೀತ ನೃತ್ಯಗಳಿಂದ ಅದನ್ನು ಸಾಗಿಸುವ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧೀಕರಿಸಿದರು. ಭಾರತೀಯ ಒಕ್ಕಲಿಗನ ಪ್ರತಿಮೂರ್ತಿಯನ್ನೇ ಸಾಮಾನ್ಯವಾಗಿ ಹೋಲುವ ಜನತೆಯ ಸ್ವತ್ತಾದ ಗಾಂಧೀಜಿ, ತ್ಯಾಗ ವೈರಾಗ್ಯದಿಂದ ಒಡಗೂಡಿದ ಭಾರತದ ಪ್ರಾಚೀನ ಪರಂಪರೆಯ ಇನ್ನೊಂದು ಮುಖದ ಪ್ರತೀಕವೆನಿಸುವರು. ಇದಲ್ಲದೆ, ಠಾಕೂರರು ಪ್ರಾಮುಖ್ಯವಾಗಿ ವೈಚಾರಿಕ ವ್ಯಕ್ತಿಯಾಗಿದ್ದರು. ಗಾಂಧೀಜಿ ಏಕಾಗ್ರತೆಯಿಂದ ಅವಿರತವಾಗಿ ದುಡಿಯುವ ವ್ಯಕ್ತಿಗಳಾದ್ದರು. ಇಬ್ಬರಿಗೂ ತಮ್ಮದೇ ಆದ ಭಿನ್ನ ಭಿನ್ನ ರೀತಿಯಲ್ಲಿ ಪ್ರಪಂಚವನ್ನು ನೋಡುವ ದೃಷ್ಟಿಕೋನ ವಿತ್ತು. ಅದೇ ಸಮಯದಲ್ಲಿ ಇಬ್ಬರೂ ಪೂರ್ಣ ಭಾರತೀಯರಾಗಿದ್ದರು.

ಮಾನವತೆಯ ಪ್ರಾಚಾರ್ಯರಾದ ಕವಿವರ್ಯ ಠಾಕೂರರು ಗಾಂಧೀಜಿಗೆ ಗುರುದೇವವಾಗಿದ್ದರು. ಗುರುದೇವರಿಗೆ ಈ ರಾಜಕಾರಣಿ ಮಾನವ ಕುಲವನ್ನು ಉದ್ಧರಿಸುವ ಮಹಾನ್ ವ್ಯಕ್ತಿತ್ವವಿದ್ದ ಮಹಾತ್ಮರಾಗಿದ್ದರು.

ಹಾಗಿದ್ದರೂ ಅವರಲ್ಲಿಯ ಮೂಲಭೂತ ಬಾಂಧವ್ಯವಿತ್ತು. ಇಬ್ಬರಲ್ಲಿಯೂ ತಮ್ಮದೇ ಆದ ರೀತಿಯಲ್ಲಿ ಭಾರತದ ಧ್ವನಿಯನ್ನು ಪ್ರತಿನಿಧಿಸುವಂತಹ ಚೈತನ್ಯ ಸಾದೃಶ್ಯವಿತ್ತು. ವ್ಯಕ್ತಿ ವ್ಯಕ್ತಿಯನ್ನು ನೋಡಿದಾಗ ಅವರ ಸ್ವಭಾವ ದೋಷಗಳಲ್ಲಿ, ಹವ್ಯಾಸ-ಅಭಿರುಚಿಗಳಲ್ಲಿ ಎರಡು ಧ್ರುವಗಳ ಅಂತರವಿತ್ತು. ಆದರೆ ನಾವು ನಿಜವಾಗಿ ಅವರನ್ನು ಅರಿತುಕೊಳ್ಳಬೇಕಾದರೆ, ಅವರನ್ನು ಕೇವಲ ಎರಡು ಬೇರೆ ಬೇರೆ ವ್ಯಕ್ತಿಗಳೆಂದು ನೋಡದೆ, ಭಾರತದ ಪ್ರತಿನಿಧಿಗಳೆಂದು, ಜಾಗ್ರತ ಪುನರುಜೀವಿಕ ಭಾರತದ ಸಾಧನೆಗಳೆಂದು ನೋಡಬೇಕು. ಅವರೂ ಒಬ್ಬರನ್ನೊಬ್ಬರು ಇದೇ ರೀತಿಯಲ್ಲಿ ಅರಿತು ಅರ್ಥಮಾಡಿಕೊಂಡಿದ್ದರು. ಇತಿಹಾಸವೂ ಸಹ ಅವರನ್ನು ಹೀಗೆಯೇ ನೋಡುತ್ತಿದೆ. ತಮ್ಮ ಸಮಕಾಲೀನರಕಿಂತ ಹೆಚ್ಚಾಗಿ ಅವರು ಹಿಂದುಸ್ತಾನದ ಗತವೈಭವವನ್ನು ಬೆಳಕಿಗೆ ತಂದು, ಅದರಲ್ಲಿದ್ದ ಅಧ್ಯಾತ್ಮದಲ್ಲಿಯ ಗುಪ್ತವಾದ ರಚನಾತ್ಮಕ ಶಕ್ತಿಯನ್ನು ವಿಮೋಚನೆ ಮಾಡಿದರು.

ಗಾಂಧೀಜಿ ಅಹಿಂಸೆಯ ದೇವದೂತರು. ಇದೇ ಅವರ ಉಸಿರು. ಈ ಉಸಿರು ಒಂದಿಲ್ಲ ಒಂದು ದಿವಸ, ದ್ವೇಷಾಸೂಯೆಗಳಲ್ಲಿ ಮುಳುಗಿ ಒಬ್ಬರ ಕತ್ತನ್ನು ಇನ್ನೊಬ್ಬರು ಹಿಚುಕುತ್ತಿರುವ ಮಾನವತೆಯನ್ನು ಆ ದವಡೆಯಿಂದ ಉಳಿಸುವದು. ಗಾಂಧೀಜಿಯವರಕಿಂತಲೂ ಮೊದಲು ಠಾಕೂರರು ಆ ದಿಶೆಯಲ್ಲಿ ತಮ್ಮ ಮನಸ್ಸನ್ನು ಹೊರಳಿಸಿ ಕಾರ್ಯಪ್ರವೃತ್ತರಾಗಿದ್ದರೆಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ ರವೀಂದ್ರರು



# ಮತ್ತು ಗಾಂಧೀಜಿ







ತಮ್ಮ "ಮುಕ್ತಧರ" ನಾಟಕದಲ್ಲಿ ಗಾಂಧೀಜಿಯವರ ಪ್ರತಿಮೂರ್ತಿಯಂತೆ ಧನಂಜಯ ನೈರಾಗಿಯ ಪಾತ್ರವನ್ನು ಸೃಷ್ಟಿ ಮಾಡಿದ್ದಾರೆ. ಇಲ್ಲಿಯೂ ತಮ್ಮ ಸ್ವತ್ತನ್ನೆಲ್ಲಾ ಪರಿತ್ಯಾಗ ಮಾಡಿ, ಆಳುತ್ತಿರುವ ಕ್ರೂರ ಸಾಮ್ರಾಟರ ವಿರುದ್ಧ 'ಕರವನ್ನು ಕೊಡಬೇಡಿ' ಎಂಬ ಚಳವಳಿಯಲ್ಲಿ ನಿಶ್ಯಸ್ತ್ರ ಜನತೆಯ ಮುಂದಾಳುತನವನ್ನು ವಹಿಸುವ ಪಾತ್ರ ಬಂದಿದೆ. ಇಲ್ಲಿ ಅಹಿಂಸೆ, ಸತ್ಯ ಹಾಗು ನಿರ್ಭಯದ ತಳ-ಹದಿಯ ಮೇಲೆ ನಿಂತಿರುವ ದೊಡ ಪ್ರಮಾಣದ ಸತ್ಯಾಗ್ರಹವಿದೆ.

ಠಾಕೂರರು, ಎಲ್ಲರಿಗೂ ಗೊತ್ತಿರುವಂತೆ, ಪ್ರಾರಂಭದ ದಿವಸಗಳಲ್ಲಿ ಬಂಗಾಲದ ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿದ್ದಾರೆ. ಅವರ ಕವಿತೆಗಳು, ಹಾಡುಗಳು, ಮತ್ತು ಭಾಷಣಗಳು ಬಂಗಾಲದಲ್ಲಿ ದೇಶಾಭಿಮಾನದ ಚೇತನ ಶಕ್ತಿಯನ್ನು ಬಡಿದ ಬಿಸಿ ಆ ಶಕ್ತಿಯು ಜನತೆಯಲ್ಲಿ ನಿಲ್ಲುವಂತೆ ಅವರ ಮನಸ್ಸನ್ನು ಹುರಿಮಾಡಿತು. ಬೇರಾರಿಗೂ ಸಾಧ್ಯವಾಗದ ರೀತಿಯಲ್ಲಿ ಅವರು ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರೂ, ಜನರನ್ನು ಮುನ್ನಡೆಯುವಂತೆ ನಿರ್ದೇಶಿಸಲು ಸಮರ್ಥರಾಗಲಿಲ್ಲ. ಹುಟ್ಟು ಮುಖಂಡರಾದ ಗಾಂಧೀಜಿ ಮತ್ತು ಅವರ ಮಧ್ಯದಲ್ಲಿ ಅದೇ ಭಿನ್ನತೆಯ ಗೋಡೆಯಿತ್ತು. ಬಂಗಾಲದಲ್ಲಿಯ ಈ ಚಟುವಟಿಕೆಗಳು ಹಿಂಸೆಯೆಡೆಗೆ ಕಣ್ಣನ್ನು ಹೊರಳಿಸಿದಾಗ, ಠಾಕೂರರು ಬೇಸತ್ತು ಆ ರಂಗದಿಂದ ಹಿಂದೆಗೆದು, ಕಾವ್ಯದೇವತೆಯ ಆರಾಧನೆಯನ್ನು ಪ್ರಾರಂಭಿಸಿದರು.

1904ರಲ್ಲಿ ಸ್ವದೇಶಿ ಸಮಾಜದ ಬಗ್ಗೆ ಭಾಷಣ ಮಾಡಿ ರಾಷ್ಟ್ರೀಯ ಚಟುವಟಿಕೆಗಳನ್ನು ಸಂಸ್ಥಾಪಿಸಿ, ಅವುಗಳನ್ನು ಜನರಿಗೆ ವಿವರಿಸಿ ಮತ್ತು 1908ರಲ್ಲಿ ಪಟ್ನಾದಲ್ಲಿ ಸೇರಿದ ಬಂಗಾಲ ಪ್ರಾಂತ ಪರಿಷತ್ತಿನಲ್ಲಿ ಅಧ್ಯಕ್ಷೀಯ ಭಾಷಣ ಮಾಡಿ ಜಾಗೃತಿಯನ್ನುಂಟು ಮಾಡಿ ಠಾಕೂರರು ಜನರನ್ನೆಲ್ಲಾ ಅಚ್ಚರಿಗೊಳಿಸಿದ್ದನ್ನು ನೆನೆಸಿಕೊಂಡರೆ, ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳನ್ನೇ ಅವು ಹೋಲುತ್ತವೆ. ಠಾಕೂರರು ಅಸಹಕಾರ, ಹಿಂದೂ ಮುಸಲ್ಮಾನ ಸಂಘಟನೆ, ಹರಿಜನೋದ್ಧಾರ, ಗ್ರಾಮಗಳ ಪುನರುಜ್ಜಿವನ, ಕೈಗಾರಿಕೆಯ ಪುನರಾಗಮನ, ಶರೀರ ಶ್ರಮ ಬೆರೆತ ಹಳ್ಳಿಯ ಶಿಕ್ಷಣ, ಗ್ರಾಮ ಸರಕಾರ, ಮತ್ತು ಸ್ವಯಂ ಸೇವಕರ ಸಂಘಟನೆಯ ಬಗ್ಗೆ ಉಗ್ರವಾಗಿ ಮಾತನಾಡಿದ್ದಾರೆ. ಅವರು ನಗರದಲ್ಲಿಯೇ ಹುಟ್ಟಿ, ನಗರದಲ್ಲಿಯೇ ಬೆಳೆದರೂ ಅವರ ಹೃದಯವು



ಹಳ್ಳಿಯಲ್ಲಿಯೇ ಇತ್ತು. ನಿಸರ್ಗಚಿತ್ರಗಳಿಂದ ಅವರ ಕಾವ್ಯ ಸ್ಫೂರ್ತಿ ಬೆಳೆಯಿತು. ಹಳ್ಳಿಯಲ್ಲಿರುವ ಜನರ ಬಗ್ಗೆ ಅವರ ಹೃದಯ ಕರಗುತ್ತಿತ್ತು.

ಇತ್ತೀಚಿನ ಬೇರೆ ಯಾವ ಇಬ್ಬರು ಭಾರತೀಯರು, ಗಾಂಧೀಜಿ-ಠಾಕೂರರಂತೆ ನಮ್ಮ ದೇಶದ ಸ್ಥಾನವನ್ನೆತ್ತರಿಸಿ ನಮ್ಮ ದೇಶದ ಸಾಂಪ್ರದಾಯದೆಡೆ ಹೊರಳಿ ನೋಡುವಂತೆ ಮಾಡಿ, ಭವಿಷ್ಯತ್ತನ್ನು ನೋಡುವಂತೆ ಮಾಡಿದವರು ಸಿಗಲಾರರು. ಅವರಿಬ್ಬರ ಸ್ನೇಹವನ್ನು ಕೊಚ್ಚಿಕೊಂಡು ಹೋಗುವಷ್ಟು ಭಿನ್ನತೆ ಅವರಿಬ್ಬರಲ್ಲಿ ಇದ್ದರೂ, ಇಬ್ಬರ ಸ್ನೇಹ ಅವರಿಬ್ಬರೂ ಮಹಾನುಭಾವರಿದ್ದರೆಂಬುದನ್ನು ತೋರಿಸಲು ಎಂದೆಂದಿಗೂ ಭಗ್ನವಾಗಲಿಲ್ಲ.

**"ಠಾಕೂರರ ಮಾತೇನು? ಅವರು ಏನನ್ನು ಸಾಧಿಸಿಲ್ಲ ? ಸಾಹಿತ್ಯದ ಒಂದು ರಂಗವನ್ನಾದರೂ ಅವರು ಬಿಟ್ಟರುವರೇ? ಇನ್ನೊಂದು ವಿಷಯವೆಂದರೆ, ಇಂತಹ ಅಲೌಕಿಕ ಶಕ್ತಿವಂತ ವ್ಯಕ್ತಿ ನಮ್ಮಲ್ಲಿಯಂತೂ ಯಾರೂ ಇಲ್ಲ. ಜಗತ್ತಿನಲ್ಲಿ ಕೂಡ ಇರುವರೋ ಇಲ್ಲವೋ ಎಂಬ ಸಂದೇಹ ಕೂಡ ನನಗೆ ಬರುತ್ತದೆ."**

**ಪುಸ್ತಕದ ಹೆಸರು:** ತಮಿಳುನಾಡಿನಲ್ಲಿ ಮಹಾತ್ಮ
**ಮೂಲ ತಮಿಳು:** ಎ. ರಾಮಸ್ವಾಮಿ
**ಅನುವಾದ:** ಸಿರಿಮನೆ ನಾಗರಾಜ್ ಮತ್ತು ಎಂ.ಎಸ್. ಪ್ರಕಾಶ್
**ಪ್ರಕಾಶಕರು:** ಗೌರಿ ಮೀಡಿಯಾ ಟ್ರಸ್ಟ್, ಬೆಂಗಳೂರು
**ಪುಟ: 950** । **ಬೆಲೆ: 120/–**

# ಗಾಂಧಿ ಜೊತೆ ತಮಿಳರ ಒಡನಾಟ




ಗಾಂಧೀಜಿ ತಮ್ಮ ವಕೀಲಿ ವೃತ್ತಿಯ ಕೆಲಸಕ್ಕಾಗಿ ದಕ್ಷಿಣ ಆಫ್ರಿಕಾಗೆ 1893ರಲ್ಲಿ ತೆರಳಿದರು. ಅವರು ಸರಿ ಸುಮಾರು 21 ವರ್ಷಗಳ ಕಾಲ ಅಲ್ಲಿಯೆ ಇದ್ದರು. ಅಲ್ಲಿ ಅವರು ಕಂಡ ಮತ್ತು ಅನುಭವಿಸಿದ ಘಟನೆಗಳು ಮುಂದೆ ಅವರ ಜೀವನ ದೃಷ್ಟಿ, ರಾಜಕೀಯ ಹೋರಾಟ ಮತ್ತು ಸತ್ಯಾನ್ವೇಷಣೆಯ ಮಾರ್ಗಗಳನ್ನು ಬೆಳೆಸಿಕೊಳ್ಳಲು ನೆರವಾಯಿತು. ಇವೆಲ್ಲದರ ಒಟ್ಟಾರೆ ಫಲವೇ ಭಾರತದಲ್ಲಿ ಅವರ ನೇತೃತ್ವದಲ್ಲಿ ನಡೆದ ಐತಿಹಾಸಿಕ ಸ್ವಾತಂತ್ರ್ಯ ಹೋರಾಟ.

ದಕ್ಷಿಣ ಆಫ್ರಕಾದಲ್ಲಿ ಗಾಂಧೀಜಿ ವಿವಿಧ ಜನಾಂಗದ ಜನರನ್ನು ಭೇಟಿ ಮಾಡಿದರು. ಅನೇಕರೊಂದಿಗೆ ತಮ್ಮ ಹೋರಾಟವನ್ನು ಗುರುತಿಸಿಕೊಂಡರು. ಆಗಿನ ಅಲ್ಲಿ ಪರಿಸ್ಥಿತಿಯು ವಿದೇಶಿಯರಿಗೆ, ಮುಖ್ಯವಾಗಿ ವರ್ಣೀಯರಿಗೆ ಹಿತಕರವಾಗಿರಲಿಲ್ಲ. ಅಲ್ಲಿನ ಸರ್ಕಾರದ ವರ್ಣಭೇದ ನೀತಿ ವಿರುದ್ಧ ಹೋರಾಡಿದ ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಮುಖ್ಯವಾಗಿ ಭಾರತೀಯರನ್ನು ಸಂಘಟಿಸುವುದರಲ್ಲಿ ಯಶಸ್ವಿಯಾದರು. ಅದು ಅವರಿಗೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ರೂಪರೇಷೆಗೆ ನೆರವಾಯಿತು.

ದಕ್ಷಿಣ ಆಫ್ರಿಕಾದಲ್ಲಿ ಅವರು ನಡೆಸಿದ ಹೋರಾಟದಲ್ಲಿ ಅವರ ಜತೆ ಇದ್ದವರಲ್ಲಿ ತಮಿಳರ ಪಾತ್ರ ಗಮನಾರ್ಹ. ತಮಿಳರ ಜೊತೆಗಿನ ಒಡನಾಟದ ವಿವರ ಮತ್ತು ಅನಂತರದಲ್ಲಿ ಗಾಂಧೀಜಿ ತಮಿಳುನಾಡಿನಲ್ಲಿ ಮಾಡಿದ ಪ್ರವಾಸಗಳನ್ನು ಈ ಪುಸ್ತಕವು ದಾಖಲಿಸುತ್ತದೆ. ಅಲ್ಲಿ ಗಾಂಧೀಜಿ ಇಟ್ಟ ಪ್ರತಿ ಹೆಜ್ಜೆಯನ್ನೂ, ಕಳೆದ ಪ್ರತಿ ಘಟನೆಯನ್ನೂ ಲೇಖಕ ಶ್ರೀ ಎ. ರಾಮಸ್ವಾಮಿ ಅವರು ಕಟ್ಟಿಕೊಟ್ಟಿದ್ದಾರೆ. ಹೀಗಾಗಿ ತಮಿಳು ಜನರ ಮೇಲೆ ಗಾಂಧೀಜಿಯ ಪ್ರಭಾವ ಮತ್ತು ಅವರ ಜೊತೆ ಗಾಂಧೀಜಿ ಬೆಳೆಸಿಕೊಂಡ ಸ್ನೇಹ, ಕಳೆದ ಕ್ಷಣಗಳು ಈ ಕೃತಿಯ ಪುಟಪುಟಗಳಲ್ಲಿಯೂ ವ್ಯಕ್ತವಾಗುತ್ತದೆ. ಸ್ವಾತಂತ್ರ್ಯ ಹೋರಾಟಕ್ಕೆ ದಕ್ಷಿಣ ಭಾರತದ, ಅದರಲ್ಲಿಯೂ ತಮಿಳರ ಕೊಡುಗೆಯನ್ನು ಈ ಪುಸ್ತಕವು ವಿವರವಾಗಿ ತೆರೆದಿಟ್ಟಿದೆ. ಹೀಗಾಗಿ ಈ ಪುಸ್ತಕವು ಒಂದು ಅಮೂಲ್ಯ ದಾಖಲೆ. ಇತಿಹಾಸದಲ್ಲಿ ಆಸಕ್ತಿ ಉಳ್ಳ ಜನರಿಂದ ಹಿಡಿದು ಸ್ವಾತಂತ್ರ್ಯ ಹೋರಾಟವನ್ನು ಅರ್ಥಮಾಡಿಕೊಳ್ಳಲು ಬಯಸುವವರಿಗೆ ಇದೊಂದು ಉತ್ತಮ ಸಂಗ್ರಹ.

ಸುದೀರ್ಘವಾದ ಪುಸ್ತಕಗಳನ್ನು ಓದುವವರಿಗೆ ಇದು ಒಳ್ಳೆಯ ಕೊಡುಗೆ. ಏಕೆಂದರೆ ಇದರ ಪುಟ ಸಂಖ್ಯೆ 950ಕ್ಕೂ ಹೆಚ್ಚು! ಬೃಹತ್ ಕೃತಿ ರಚನೆಯಲ್ಲಿ ಲೇಖಕರ ಪರಿಶ್ರಮ ಪ್ರಶಂಸನೀಯ. ಇತಿಹಾಸದ ಘಟನೆಗಳನ್ನು ದಾಖಲಿಸುವುದು ಸುಲಭ ಸಾಧ್ಯವಲ್ಲ. ಆದರೆ ಲೇಖಕರು ಅದನ್ನು ಮಾಡಿದ್ದಾರೆ ಮತ್ತು ಇತಿಹಾಸ ಆಸಕ್ತರಿಗೆ ಮತ್ತು ಗಾಂಧೀಜಿಯ ಬದುಕಿನ ಹೆಜ್ಜೆಗಳನ್ನು ತಿಳಿಯಬಯಸುವವರಿಗೆ ಈ ಕೃತಿಯು ನೆರವಾಗುತ್ತದೆ.

# ಡಾ.ಸುರೇಶ್‌ಗೆ ಗಾಂಧಿ ದತ್ತಿ ಪ್ರಶಸ್ತಿ



ಕನ್ನಡ ಸಾಹಿತ್ಯ ಪರಿಷತ್ ಪ್ರದಾನ ಮಾಡುವ ಎ. ಆರ್.ನಾರಾಯಣಘಟ್ಟ ಮತ್ತು ಸರೋಜಮ್ಮ ಗಾಂಧೀ ದತ್ತಿ ಪುರಸ್ಕಾರ ಪುದುವಟ್ಟು ಪ್ರಶಸ್ತಿಗೆ ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷ ಡಾ. ಹೆಚ್.ಎಸ್. ಸುರೇಶ್‌ರವರ 'ಪಾತಕ ಲೋಕದಿಂದ ಗಾಂಧಿಯಾನದೆಡೆಗೆ' (ಮುಂಬೈನ ಲಕ್ಷ್ಮಣ್ ತುಕಾರಾಂ ಗೋಲೆ ಜೀವನಾಧಾರಿತ ಕಥನ) ಕೃತಿ ಆಯ್ಕೆಯಾಗಿದೆ.

ಹೈಸ್ಕೂಲ್ ಶಿಕ್ಷಕನಾಗಿ ವೃತ್ತಿ ಜೀವನ ಪ್ರಾರಂಭ. ಮುಂದೆ ಕೇಂದ್ರ ಸರಕಾರದ ಯುವಜನ ಇಲಾಖೆಯಲ್ಲಿ ಮಂಡ್ಯದ ನೆಹರೂ ಯುವಕೇಂದ್ರದಲ್ಲಿ ಹತ್ತು ವರ್ಷಗಳ ಸೇವೆ. ದಕ್ಷಿಣ ಅಮೆರಿಕೆಯ ಗಯಾನದ ಜಾರ್ಜ್ ಟೌನ್ ವಿ.ವಿ.ನಲ್ಲಿ ಯುವಕಾರ್ಯದಲ್ಲಿ ಡಿಪ್ಲೊಮಾ. ನಾಂದೇಡ್ ವಿ.ವಿ.ಯಿಂದ ಪಿ ಹೆಚ್‌ಡಿ. – ಇದಿಷ್ಟು ಅವರು ನಡೆದು ಬಂದ ದಾರಿ.

2019ರಲ್ಲಿ ಶ್ರೀ ಎಲ್. ನರಸಿಂಹಯ್ಯ, ಡಾ. ಅಬೀದಾ ಬೇಗಂ ಅವರೊಂದಿಗೆ ನೆರೆಯ ಬಾಂಗ್ಲಾ ದೇಶದ ನೌಖಾಲಿಯಲ್ಲಿ ಹತ್ತು ದಿನಗಳ ಶಾಂತಿ ಸದ್ಭಾವನಾ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

# ಡಾ. ದಯಾನಂದಗೆ 'ಜಯಶ್ರೀ ದತ್ತಿ' ಪ್ರಶಸ್ತಿ



ಶ್ರೀಮತಿ ಜಂ.ಯು.ಲಕ್ಷ್ಮೀ ಡಾ. ಹೊ.ಶ್ರೀನಿವಾಸಯ್ಯ ದತ್ತಿ ಪ್ರಶಸ್ತಿ – 2025, ಡಾ.ನಾ. ದಯಾನಂದ ರಚಿಸಿರುವ 'ಗಾಂಧಿ ಆಂತರ್ಯ' ಕೃತಿಗೆ ಲಭಿಸಿದೆ.

ಪ್ರಖರ ಗಾಂಧೀವಾದಿಗಳೂ, ಬರಹಗಾರರೂ ಆಗಿದ್ದ ದಿವಂಗತ ಚಿಕ್ಕನಾಯಕನಹಳ್ಳಿ ಜಿ. ವಿ.ನಾರಾಯಣ ಮೂರ್ತಿ ಅವರ ಪುತ್ರ ಡಾ.ನಾ.ದಯಾನಂದ ತಮ್ಮ ವೈಚಾರಿಕ ನಿಲುವು ಮತ್ತು ಕೃತಿಗಳಿಂದಾಗಿ ಸಾಹಿತ್ಯ ಲೋಕಕ್ಕೆ ಪರಿಚಿತರು. ಶ್ರೀಯುತರ ಐವತ್ತನೇ ಕೃತಿ 'ಗಾಂಧಿ ಆಂತರ್ಯ' ಅವರೇ ಹೇಳಿದಂತೆ 'ಅಪರೂಪ ವ್ಯಕ್ತಿತ್ವದ ನೀಳ್ಗತೆ' ಸುಪ್ರಸಿದ್ಧ ಆಂಗ್ಲ ಭಾಷಾ ಸಾಹಿತಿ ಮತ್ತು ತತ್ತ್ವಶಾಸ್ತ್ರ ಪ್ರಾಧ್ಯಾಪಕ ಹಾಸನ ರಾಜಾರಾವ್ ಅವರು ಬರೆದ 'ದಿ ಗ್ರೇಟ್ ಇಂಡಿಯನ್ ವೆ' ಅನ್ನುವ ಗಾಂಧೀ ಕಥನವನ್ನು ಡಾ. ದಯಾನಂದ ಕನ್ನಡದಲ್ಲಿ ನಮಗೆ ನೀಡಿದ್ದಾರೆ.

ಭಾರತದ ಶ್ರೇಷ್ಠ ಕಾವ್ಯಗಳಾದ ರಾಮಾಯಣ, ಮಹಾಭಾರತದ ಕೆಲವು ಘಟನೆ ಮತ್ತು ವ್ಯಕ್ತಿಗಳನ್ನು ಗಾಂಧಿ ಪಯಣದೊಂದಿಗೆ ಸಮೀಕರಿಸುವ ಪ್ರಯತ್ನ ಈ ಕೃತಿಯಲ್ಲಿದೆ.

# ಸರಳ ಸಜ್ಜನ ಲಾಲ್ ಬಹದ್ದೂರ್ ಶಾಸ್ತ್ರಿ

**ಶಾಸ್ತ್ರಿ ಅವರು ಕೇಂದ್ರ ಸಂಪುಟದಲ್ಲಿ ರೈಲ್ವೆ, ಸಾರಿಗೆ ಮತ್ತು ಸಂವಹನ ಹಾಗೂ ವಾಣಿಜ್ಯ ಮತ್ತು ಉದ್ಯಮಗಳಂತಹ ಮಹತ್ವದ ಇಲಾಖೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಅವರು ರೈಲ್ವೆ ಸಚಿವರಾಗಿದ್ದ ಅವಧಿಯಲ್ಲಿ ರೈಲು ದುರಂತವೊಂದು ಸಂಭವಿಸಿ ಅನೇಕರು ಪ್ರಾಣ ಕಳೆದುಕೊಂಡರು. ಅದಕ್ಕೆ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.**



ಲಾಲ್ ಬಹದ್ದೂರ್ ಶಾಸ್ತ್ರಿ ಉತ್ತರ ಪ್ರದೇಶದ ವಾರಣಾಸಿ ಸಮೀಪದ ಮುಗಲ್ಸರಾಯಿಯಲ್ಲಿ ಅಕ್ಟೋಬರ್ 2, 1904ರಂದು ಜನಿಸಿದರು. ಗಾಂಧಿ ಹುಟ್ಟಿ 35 ವರ್ಷಗಳ ಬಳಿಕ ಜನಿಸಿದ ಶಾಸ್ತ್ರಿ, ನಂತರದ ದಿನಗಳಲ್ಲಿ ಗಾಂಧೀಜಿ ಅವರ ಕಟ್ಟಾ ಅನುಯಾಯಿ ಆದರು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಒಂದೂವರೆ ವರ್ಷದಲ್ಲಿದ್ದಾಗಲೇ ತಂದೆಯನ್ನು ಕಳೆದುಕೊಂಡು, ತಾಯಿಯ ಮಡಿಲಲ್ಲೇ ಬೆಳೆದರು. ವಿದ್ಯಾಭ್ಯಾಸವನ್ನು ವಾರಣಾಸಿಯಲ್ಲಿ ಮಾಡಿದರು. 16 ವರ್ಷದಲ್ಲಿದ್ದಾಗ ಗಾಂಧಿ ಅವರ ಕರೆಗೆ ಓಗೊಟ್ಟು ಅಸಹಕಾರ ಚಳವಳಿಯಲ್ಲಿ ಪಾಲ್ಗೊಂಡರು. ನಂತರ ವಾರಣಾಸಿಯ ಕಾಶಿ ವಿದ್ಯಾಪೀಠವನ್ನು ಸೇರಿದರು.

ಶಾಸ್ತ್ರಿ ಅವರು ಕೇಂದ್ರ ಸರ್ಕಾರದ ಸಂಪುಟದಲ್ಲಿ ಹಲವು ಪ್ರಮುಖ ಇಲಾಖೆಗಳನ್ನು ನಿಭಾಯಿಸಿದ್ದರು. ರೈಲ್ವೆ, ಸಾರಿಗೆ ಮತ್ತು ಸಂವಹನ ಹಾಗೂ ವಾಣಿಜ್ಯ ಮತ್ತು ಉದ್ಯಮ ಇಲಾಖೆಗಳಂತಹ ಮಹತ್ವದ ಸಚಿವಾಲಯಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಶಾಸ್ತ್ರಿ ಅವರು ರೈಲ್ವೆ ಸಚಿವರಾಗಿದ್ದ ಅವಧಿಯಲ್ಲಿ ರೈಲು ದುರಂತವೊಂದು ಸಂಭವಿಸಿ ಅನೇಕರು ಪ್ರಾಣ ಕಳೆದುಕೊಂಡರು. ಅದರ ಬೆನ್ನಲ್ಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ರಾಜಕೀಯ ಜೀವನದಲ್ಲಿ ಪ್ರಮುಖ ಖಾತೆಗಳನ್ನು ಹೊಂದಿದ್ದ ಅವರು, 1964ರ ಜೂನ್‌ನಿಂದ 1966 ಜನವರಿವರೆಗೆ ದೇಶದ ಎರಡನೇ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು.



ಭಾರತದ ರಾಜಕೀಯ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಶಾಸ್ತ್ರಿ ಅವರು, ಜೈ ಜವಾನ್, ಜೈ ಕಿಸಾನ್ ಎಂಬ ಘೋಷವಾಕ್ಯದ ಮೂಲಕ ದೇಶದ ಅಭಿವೃದ್ಧಿಗೆ ಹೊಸ ಹೊಳಪು ನೀಡಿದವರು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನಿ ಆಗಿ ಆಡಳಿತ ನಡೆಸಿದ್ದು ಕೇವಲ 18 ತಿಂಗಳು ಮಾತ್ರ. ಅಷ್ಟು ಸಣ್ಣ ಅವಧಿಯಲ್ಲೇ ಪಾಕಿಸ್ತಾನದೊಂದಿಗಿನ ಯುದ್ಧದಲ್ಲಿ ದೇಶವನ್ನೂ ಮುನ್ನಡೆಸಿದರು. ದೇಶದಲ್ಲಿನ ಆಹಾರ ಕೊರತೆಯನ್ನು ನೀಗಿಸಿದರು. ಹಿಂದಿ, ಇಂಗ್ಲಿಷ್ ಭಾಷಾ ಗೊಂದಲವನ್ನು ಬಗೆಹರಿಸಿದರು. ಕಾಶ್ಮೀರದ ಹಜರತ್ಬಾಲ್‌ನಂತಹ ಸಮಸ್ಯೆಯನ್ನು ಹೂವೆತ್ತಿದಂತೆ ಪರಿಹರಿಸಿದ್ದರು.

ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಗಟ್ಟಿದನಿಯಲ್ಲಿ ಹೇಳಿದರು. ಶಾಸ್ತ್ರೀಜಿ ಪ್ರಧಾನಿಯಾಗಿದ್ದಾಗ ನೆರೆಯ ಚೀನಾದ ಕ್ಯಾತೆಗೆ ಬಗ್ಗಲಿಲ್ಲ. ವಿಶ್ವಸಂಸ್ಥೆಯ ಒತ್ತಡಕ್ಕೂ ಮಣಿಯಲಿಲ್ಲ. ಅಮೆರಿಕದ ಬೆದರಿಕೆಗೆ ಕ್ಯಾರೇ ಎನ್ನಲಿಲ್ಲ. ಕೊನೆಗೆ ಶಾಂತಿ ಮಂತ್ರ ಜಪಿಸುತ್ತಲೇ ತಾಷ್ಕೆಂಟಿಗೆ ಹೋಗಿ ಅಲ್ಲಿ ತಮ್ಮ ಜೀವವನ್ನೇ ಬಲಿಕೊಟ್ಟರು.

**"ನಮ್ಮ ಈ ವಿಶಾಲ ದೇಶದಲ್ಲಿ, ಜನರು ವಿಭಿನ್ನ ಧರ್ಮಗಳನ್ನು ಪ್ರತಿಪಾದಿಸುತ್ತಾರೆ, ವಿಭಿನ್ನ ಭಾಷೆಗಳನ್ನು ಮಾತನಾಡುತ್ತಾರೆ, ವಿಭಿನ್ನವಾಗಿ ಉಡುಗೆ ತೊಡುತ್ತಾರೆ ಮತ್ತು ವಿಭಿನ್ನ ಪದ್ಧತಿಗಳನ್ನು ಪಾಲಿಸುತ್ತಾರೆ; ಆದರೆ ನಾವು ಒಂದೇ ರಾಷ್ಟ್ರ; ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸ ಮತ್ತು ನಮ್ಮ ಭವಿಷ್ಯದ ಅಭಿವೃದ್ಧಿಯಲ್ಲಿ ನಮ್ಮ ನಂಬಿಕೆ ನಮ್ಮ ಸಾಮಾನ್ಯ ಬಂಧಗಳಾಗಿವೆ."**

**– ಲಾಲ್ ಬಹದ್ದೂರ್ ಶಾಸ್ತ್ರಿ**

**(ಕೃಪೆ: ವಿಜಯ ಕರ್ನಾಟಕ)**

## ಇತಿಹಾಸಕಾರ, ಲೇಖಕ ಡಾ.ರಾಮಚಂದ್ರ ಗುಹಾಗೆ "ಮಹಾತ್ಮಗಾಂಧಿ ಸೇವಾ ಪ್ರಶಸ್ತಿ"

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪ್ರತಿ ವರ್ಷ ನೀಡಲಾಗುವ ಈ ಗೌರವಾನ್ವಿತ ಪ್ರಶಸ್ತಿಯನ್ನು, ಗಾಂಧೀಜಿಯವರ ಜೀವನ ಮೌಲ್ಯಗಳನ್ನು ಸಮಾಜದಲ್ಲಿ ಹರಡಲು ಮಹತ್ತರ ಕೊಡುಗೆ ನೀಡಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಪ್ರದಾನ ಮಾಡಲಾಗುತ್ತದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಜಯಂತಿಯನ್ನು ರಾಜ್ಯಾದ್ಯಂತ ಅರ್ಥಪೂರ್ಣವಾಗಿ, ಜನಸಾಮಾನ್ಯರು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಆಚರಿಸಲು ರಾಜ್ಯ ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಆಚರಣೆಯ ಅಂಗವಾಗಿ ಗಾಂಧೀಜಿಯವರ ತತ್ವ, ಮೌಲ್ಯ ಹಾಗೂ ಸಮಾಜಮುಖಿ ಚಿಂತನೆಗಳನ್ನು ಜನಮನಗಳಲ್ಲಿ ಬಿತ್ತುವಲ್ಲಿ ಮಹತ್ವದ ಪಾತ್ರ ವಹಿಸಿರುವ ಡಾ.ರಾಮಚಂದ್ರ ಗುಹಾ ಅವರನ್ನು ಈ ವರ್ಷದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಡಾ. ಗುಹಾ ಅವರು ಭಾರತದ ಸಮಕಾಲೀನ ಇತಿಹಾಸ, ರಾಜಕೀಯ ಚಳವಳಿಗಳು, ಪರಿಸರ ಹೋರಾಟಗಳು ಹಾಗೂ ಕ್ರಿಕೆಟ್ ಕುರಿತ ತಮ್ಮ ಅಧ್ಯಯನ ಮತ್ತು ಗ್ರಂಥ ರಚನೆಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ.



ಅವರ ಪ್ರಮುಖ ಕೃತಿಗಳು:

India After Gandhi (ಸ್ವಾತಂತ್ರ್ಯಾ ನಂತರ ಭಾರತದ ಇತಿಹಾಸ)

A Corner of a Foreign Field (ಭಾರತೀಯ ಕ್ರಿಕೆಟ್‌ನ ಸಾಮಾಜಿಕ ಇತಿಹಾಸ)

Gandhi Before India (ಮಹಾತ್ಮ ಗಾಂಧೀಜಿಯವರ ಜೀವನ ಚರಿತ್ರೆಯ ಮೊದಲ ಭಾಗ)

Gandhi: The Years That Changed the World (ಜೀವನ ಚರಿತ್ರೆಯ ಎರಡನೇ ಭಾಗ)

The Unquiet Woods (ತಳಸ್ಥರದ ಪರಿಸರ ಚಳವಳಿಗಳ ಅಧ್ಯಯನ)

ಈ ಕೃತಿಗಳು ಇತಿಹಾಸ ಅಧ್ಯಯನವನ್ನು ಶ್ರೀಮಂತಗೊಳಿಸುವುದಷ್ಟೇ ಅಲ್ಲದೆ, ಸಾಮಾನ್ಯ ಓದುಗರಿಗೂ ಸುಲಭವಾಗಿ ತಲುಪುವ ಶೈಲಿಯಲ್ಲಿ ಬರೆದಿರುವುದರಿಂದ ಸಮಾಜದಲ್ಲಿ ಚಿಂತನ–ಮನನಕ್ಕೆ ಪ್ರೇರಣೆಯಾಗಿವೆ. ವಿಶೇಷವಾಗಿ ಗಾಂಧೀ ತತ್ವಗಳನ್ನು ಆಳವಾಗಿ ವಿಶ್ಲೇಷಿಸಿ ಅವನ್ನು ಸಮಕಾಲೀನ ಭಾರತಕ್ಕೆ ಸಂಬಂಧಿಸಿದಂತೆ ಅರ್ಥೈಸುವಲ್ಲಿ ಡಾ. ಗುಹಾ ಅವರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರ ಗಾಂಧೀಜಿಯವರ ಎರಡು ಸಂಪುಟಗಳ ಜೀವನ ಚರಿತ್ರೆ ಕನ್ನಡ ಸೇರಿದಂತೆ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ.

ರಾಜ್ಯ ಸರ್ಕಾರವು ಈ ಪ್ರಶಸ್ತಿಯ ಮೂಲಕ ಯುವ ಪೀಳಿಗೆಗೆ ಗಾಂಧೀಜಿಯವರ ಆದರ್ಶಗಳನ್ನು ಪರಿಚಯಿಸಿ, ಸತ್ಯ, ಅಹಿಂಸೆ, ಶಾಂತಿ ಮತ್ತು ಸೇವಾ ಮನೋಭಾವನೆಗಳನ್ನು ಬಲಪಡಿಸಲು ಬದ್ಧವಾಗಿದೆ. ಡಾ. ರಾಮಚಂದ್ರ ಗುಹಾ ಅವರಿಗೆ ಈ ಪ್ರಶಸ್ತಿ ಪ್ರದಾನವಾಗುವುದು, ಸಮಾಜದಲ್ಲಿ ಗಾಂಧೀಜಿಯವರ ಆದರ್ಶಗಳ ಪ್ರಚುರತೆ, ಸಂವಾದ ಮತ್ತು ಅಧ್ಯಯನಕ್ಕೆ ಪ್ರೇರಣೆಯಾದಂತಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗಾಂಧೀಜಿ ಪ್ರತಿಪಾದಿಸಿದ ಜೀವನ ಮೌಲ್ಯಗಳ ಪುನರುತ್ಥಾನ ಯುವ ಜನರಿಂದ ಸಾಧ್ಯ



ಬೆಂಗಳೂರು ಹೆಸರಘಟ್ಟ ಮುಖ್ಯರಸ್ತೆಯ ಸಿಡೇದ ಹಳ್ಳಿಯಲ್ಲಿ ಶಿಕ್ಷಣ ತಜ್ಞ ಡಾ.ಉದಯ ರತ್ನಕುಮಾರ್‌ರವರ ನೇತೃತ್ವದಲ್ಲಿ ಮುನ್ನಡೆಯುತ್ತಿರುವ ನಿಸರ್ಗ ವಿದ್ಯಾನಿಕೇತನ ಶಾಲೆಯ ರಜತ ಮಹೋತ್ಸವದ ಅಂಗವಾಗಿ ಕರ್ನಾಟಕ ಸರ್ವೋದಯ ಮಂಡಲ ಸಹಯೋಗದೊಂದಿಗೆ ಆಯೋಜಿಸಿದ್ದ ಚರ್ಚಾಸ್ಪರ್ಧೆಯನ್ನು ಆಚಾರ್ಯ ವಿನೋಬಾ ಭಾವೆಯವರ 131ನೇ ಜಯಂತಿಯ ದಿನದಂದು ರಾಷ್ಟ್ರೀಯ ಸೇವಾ ಯೋಜನೆಯ ನಿವೃತ್ತ ಸಲಹೆಗಾರ, ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷ ಡಾ.ಎಚ್.ಎಸ್ ಸುರೇಶ್ ಉದ್ಘಾಟಿಸಿ ಮಾತನಾಡುತ್ತಾ ಭವ್ಯ ಭಾರತದ ಭವಿಷ್ಯದ ಪೀಳಿಗೆಯ ಯುವಜನರಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಪ್ರತಿಪಾದಿಸಿದ ಜೀವನ ಮೌಲ್ಯಗಳು ಪುನರುತ್ಥಾನವಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮಾನವೀಯತೆ ಇಲ್ಲದ ವಿಜ್ಞಾನ, ತತ್ವರಹಿತ ರಾಜಕೀಯ, ಚಾರಿತ್ರ್ಯವಿಲ್ಲದ ಶಿಕ್ಷಣ , ನೀತಿ ಇಲ್ಲದ ವ್ಯಾಪಾರ, ದುಡಿಮೆ ಇಲ್ಲದ ಸಂಪತ್ತು ಈ ವಿಚಾರಗಳ ಕುರಿತು ಚರ್ಚಾಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಮಾತನಾಡಿದರು. ಶಾಲೆಯ 8ನೇ ತರಗತಿ ವಿದ್ಯಾರ್ಥಿ ಶ್ರಾವಣಿ ಆರ್.ಗೌಡ ಪ್ರಥಮ ಬಹುಮಾನ, ಡಿಂಪಲ್ ಮತ್ತು ನಿರೀಕ್ಷ ಎರಡನೇ ಬಹುಮಾನವನ್ನು ಸಮನಾಗಿ ಹಾಗೂ ಸಂತೋಷ್ ಮೂರನೇ ಬಹುಮಾನಕ್ಕೆ ಭಾಜನರಾದರು. ಕರ್ನಾಟಕ ಸರ್ವೋದಯ ಮಂಡಲದ ಗೌ.ಕಾರ್ಯದರ್ಶಿ ಡಾ.ಯ.ಚಿ.ದೊಡ್ಡಯ್ಯ, ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯನಿ ಜಯಮಾಲಾ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಶಾಲೆಯ ಆಡಳಿತಾಧಿಕಾರಿ ಧನುಷ್‌ಕುಮಾರ್ ವೇದಪುರಿ ಉಪಸ್ಥಿತರಿದ್ದರು, ಅಧ್ಯಾಪಕರಾದ ಆರಿಫ್ ಪಾಷಾ ಮತ್ತು ಮಮತಾ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಕು.ಭುವನ ಪ್ರಾರ್ಥನೆ ಮತ್ತು ಸಾವಿತ್ರಮ್ಮನವರು ನಿರೂಪಣೆ ನಡೆಸಿಕೊಟ್ಟರು.



ಶ್ರೀ. ಸದಾಶಿವರೆಡ್ಡಿ
ಅಧ್ಯಕ್ಷರು

# ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ

## Sreenidhi Souharda Sahakari Bank Niyamitha

ಪ್ರಧಾನ ಕಛೇರಿ : ನಂ. 113, ಆರ್.ವಿ. ರಸ್ತೆ, ವಿ.ವಿ.ಪುರಂ, ಬೆಂಗಳೂರು – 560 004, ದೂರವಾಣಿ : 080–2660 1152, 2660 1153
e-mail : sssbn@sreenidhibank.com Website : www.sreenidhibank.com



ಶ್ರೀ. ವಿ. ಶಂಕರರೆಡ್ಡಿ
ಉಪಾಧ್ಯಕ್ಷರು

### ದಿನಾಂಕ 30/09/2025ರ ಅಂತ್ಯಕ್ಕೆ ಬ್ಯಾಂಕಿನ ಆರ್ಥಿಕ ಸ್ಥಿತಿ (ರೂ. ಲಕ್ಷಗಳು)

| ಕ್ರ. ಸಂ. | ವಿವರಗಳು | 30–09–2025 |
|---|---|---|
| 1. | ಒಟ್ಟು ಸದಸ್ಯರು (ಸಂಖ್ಯೆ) | 11,129 |
| 2. | ಷೇರು ಬಂಡವಾಳ | 2587.03 |
| 3. | ಕಾಯ್ದಿರಿಸಿದ & ಇತರೆ ನಿಧಿಗಳು | 5805.64 |
| 4. | ಠೇವಣಿಗಳು | 48356.59 |
| 5. | ಸಾಲ ಮತ್ತು ಮುಂಗಡಗಳು | 32987.25 |
| 6. | ಹೂಡಿಕೆಗಳು | 20337.55 |
| 7. | ದುಡಿಯುವ ಬಂಡವಾಳ | 57871.99 |
| 8. | ನಿವ್ವಳ ಲಾಭ | 400.79 |
| 9. | ನಿವ್ವಳ ನಿಷ್ಕ್ರಿಯ ಆಸ್ತಿ ಶೇಕಡ (Net NPA) | 0.90% |

### ಇತರೆ ಸೌಲಭ್ಯಗಳು

UPI
UNIFIED PAYMENTS INTERFACE
PhonePe G Pay Paytm
ಪಾವತಿ ಸೌಲಭ್ಯ ಒದಗಿಸಲಾಗುತ್ತದೆ.

**ಪಿಎಂಎಸ್‌ಬಿವೈ ಪಿಎಂಜೆಜೆಬಿವೈ ಯಶಸ್ವಿನಿ ಸ್ಕೀಮ್ ಸೌಲಭ್ಯವಿದೆ**

### ನಿಶ್ಚಿತ ಠೇವಣಿಗಳು, ಶ್ರೀನಿಧಿ ಕ್ಯಾಷ್ ಸರ್ಟಿಫಿಕೇಟ್ ಮತ್ತು ಆವರ್ತ ಠೇವಣಿಗಳ ಮೇಲಿನ ಬಡ್ಡಿದರಗಳು

| ಠೇವಣಿ ಅವಧಿ | ಬಡ್ಡಿದರಗಳು | | | |
|---|---|---|---|---|
| | ನಿಶ್ಚಿತ ಠೇವಣಿಗಳು | | ಶ್ರೀನಿಧಿ ಕ್ಯಾಷ್ ಸರ್ಟಿಫಿಕೇಟ್ & ಆವರ್ತ ಠೇವಣಿ (ಕನಿಷ್ಠ ಅವಧಿ 12 ತಿಂಗಳು) | |
| | ಸಾಮಾನ್ಯರಿಗೆ | ಹಿರಿಯ ನಾಗರೀಕರಿಗೆ | ಸಾಮಾನ್ಯರಿಗೆ | ಹಿರಿಯ ನಾಗರೀಕರಿಗೆ |
| 31 ದಿನಗಳಿಂದ 90 ದಿನಗಳವರೆಗೆ | 4.50% | 5.00% | – | – |
| 91 ದಿನಗಳಿಂದ 180 ದಿನಗಳವರೆಗೆ | 5.50% | 6.00% | – | – |
| 181 ದಿನಗಳಿಂದ 1 ವರ್ಷದವರೆಗೆ | 6.25% | 6.75% | – | – |
| 1 ವರ್ಷಕ್ಕೆ ಮೇಲ್ಪಟ್ಟು 2 ವರ್ಷಗಳವರೆಗೆ | 7.50% | 8.00% | 7.50% | 8.00% |
| 2 ವರ್ಷಕ್ಕೆ ಮೇಲ್ಪಟ್ಟು 3 ವರ್ಷಗಳವರೆಗೆ | 7.25% | 7.75% | 7.25% | 7.75% |
| 3 ವರ್ಷಕ್ಕೆ ಮೇಲ್ಪಟ್ಟು 5 ವರ್ಷಗಳವರೆಗೆ | 7.00% | 7.50% | 7.00% | 7.50% |
| 5 ವರ್ಷಗಳಿಗೆ ಮೇಲ್ಪಟ್ಟ ಅವಧಿಗೆ | 6.50% | 7.00% | 6.50% | 7.00% |
| ಉಳಿತಾಯ ಖಾತೆ | 3.00% | | | |

- ಹಿರಿಯ ನಾಗರೀಕರು – ಎಂದರೆ 60 ವರ್ಷಗಳು ಮತ್ತು ಅದಕ್ಕೆ ಮೇಲ್ಪಟ್ಟ ವಯೋಮಾನದವರು
- ರೂ. 1 ಕೋಟಿಗಳಿಗಿಂತ ಹೆಚ್ಚಿನ ಮೊತ್ತದ ಏಕಗಂಟಿನ ಒಂದು ವರ್ಷಕ್ಕೂ ಮೇಲ್ಪಟ್ಟ ಅವಧಿಯ ಠೇವಣಿಗೆ 0.50% ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುವುದು.

ನಮ್ಮ ಎಲ್ಲಾ ಗ್ರಾಹಕರಿಗೂ
ದೀಪಾವಳಿ ಹಬ್ಬದ ಶುಭಾಶಯಗಳು







# ಹರಿದಾಸ ಸಂಪದ ಟ್ರಸ್ಟ್, ಬೆಂಗಳೂರು

ಅರ್ಪಿಸುವ

ಹರಿದಾಸ ಹಬ್ಬ ರಜತ ಮಹೋತ್ಸವ ಪ್ರಯುಕ್ತ

## ರಜತರಥ – ಭಕುತಿಪಥ

ಸಂಚಾರಿ ದಾಸ ಸಾಹಿತ್ಯ ಸಂಭ್ರಮ 6ನೇ ಸರಣಿ ಕಾರ್ಯಕ್ರಮ

# ನಂದಿ ವಾಹಿನಿ ನಾದ ಸಂಪದ

**ಶನಿವಾರ 29, ನವೆಂಬರ್ 2025** **ಸಂಜೆ 4.00 ರಿಂದ 9.00**

**ನಾದ ಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ**

ಅವಧೂತ ದತ್ತಪೀಠ, ನಂಜನಗೂಡು ರಸ್ತೆ, ಮೈಸೂರು



ದಿವ್ಯ ಸಾನ್ನಿಧ್ಯ

ಪರಮ ಪೂಜ್ಯ ಶ್ರೀ **ಗಣಪತಿ ಸಚ್ಚಿದಾನಂದ ಸ್ವಾಮೀಜಿ**

ಪೀಠಾಧಿಪತಿಗಳು, ಅವಧೂತ ದತ್ತಪೀಠ, ಮೈಸೂರು

**ಸಹಸ್ರ ಕಂಠ ಗಾಯನ**

ಏಕ ಕಾಲದಲ್ಲಿ ಒಂದು ಸಾವಿರಕ್ಕೂ ಅಧಿಕ
ಗಾಯಕರಿಂದ ದಾಸರ ಪದಗಳ ಗಾಯನ

**ಸಂವಾದ: ಭಕ್ತ – ಭಗವಂತ**

ಭಾಗವಹಿಸುವ ವಿದ್ವನ್ಮಣಿಗಳು



ವಿದ್ವಾನ್ ರಾಮವಿಠ್ಠಲಾಚಾರ್



ವಿದ್ವಾನ್ ಕಲ್ಲಾಪುರ ಪವಮಾನಾಚಾರ್



ವೈ.ವಿ.ಗುಂಡೂರಾವ್



ವಿದ್ವಾನ್ ಕೃಷ್ಣರಾಜ ಕುತ್ಪಾಡಿ

**ವಿಶೇಷ ದಾಸವಾಣಿ**



ವಿದ್ವಾನ್ ವಿ.ವಿ ಪ್ರಸನ್ನ

ಪ್ರಖ್ಯಾತ ಗಾಯಕರು

ವಿವರಗಳಿಗೆ: 98450 68577

**ಸರ್ವರಿಗೂ ಆದರದ ಸ್ವಾಗತ**

# The Gift of India



Is there aught you need that my hands withhold,
Rich gifts of raiment or grain or gold?
Lo ! I have flung to the East and West
Priceless treasures torn from my breast,
And yielded the sons of my stricken womb
To the drum-beats of the duty, the sabers of doom.
Gathered like pearls in their alien graves
Silent they sleep by the Persian waves,
Scattered like shells on Egyptian sands,
They lie with pale brows and brave, broken hands,
they are strewn like blossoms mown down by chance
On the blood-brown meadows of Flanders and France.
Can ye measure the grief of the tears I weep
Or compass the woe of the watch I keep?
Or the pride that thrills thro' my heart's despair
And the hope that comforts the anguish of prayer?
And the far sad glorious vision I see
Of the torn red banners of victory?
When the terror and the tumult of hate shall cease
And life be refashioned on anvils of peace,
And your love shall offer memorial thanks
To the comrades who fought on the dauntless ranks,
And you honour the deeds of the dauntless ones,
Remember the blood of my martyred sons!

– Sarojini Naidu


1

# A Glimpse of

**Sabarmati Ashram, where Gandhi lived will reawaken your sense of Independence. on the occasion of Gandhi Jayanthi, let us have a tour to the Ashram.**


2

Sabarmati Ashram in Gujarat, located north of Ahmedabad, was originally the residence of Mahatma Gandhi and his spouse Kasturba. The ashram is flanked by a calm and quiet stretch by the Sabarmati River. This is also the location where Gandhi started his Dandi March from. Because it was located in between a prison and a cemetery, Gandhi believed that a Satyagrahi would certainly end his life in either a prison or a graveyard. Sabarmati Ashram will reawaken your sense of independence. The museum is the most well-known of the many institutions within the Sabarmati ashram's grounds.


3


4

Various personal letters and images of Gandhi are displayed throughout the space. Upasana Mandir, Magan Niwas, Vinoba, Nandini, and Kutir are some of the ashram's other structures. The ashram is now a historical site, having witnessed numerous historical occurrences. You can also visit this place and learn more about India's ancient history.

The original ashram was founded in May 1915 at Jivanlal Desai's Kochrab Bungalow (approximately 10 kilometers from here), who was a barrister associate of Gandhi, as Satyagraha Ashram. Mahatma Gandhi required additional space to carry out tasks such as farming and animal husbandry so it was transferred to a 36-acre site on the banks of the river Sabarmati on June 17, 1917.


5

Mahatma Gandhi who lived at Sabarmati (Gujarat) and Sevagram (Wardha, Maharashtra) when he was not travelling across India or in prison.[1] He lived in Sabarmati or Wardha for a total of twelve years with his wife Kasturba Gandhi and followers, including Vinoba Bhave. The Bhagavad Gita was recited here daily as part of the Ashram schedule.

It was from here that Gandhi led the Dandi March, also known as the Salt Satyagraha on 12 March 1930. In recognition of the significant influence that this march had on the Indian independence movement, the Indian government has established the ashram as a national monument.

Present day

Gandhi Smarak Sangrahalaya

# Sabarmati Ashram

1. Hridaya Kunj
2. Prayer in Ashram
3. Gandhiji's Charkha and Table
4. View from Gandhi's House
5. Artifacts
6. Gandhi Smarak Sangrahalaya
7. Back view of Gandhi's house
8. Enlarged Replika Signature in Different Languages
9. Warli art
10. Gandhi Sangrahlay - Inside Corridors





The ashram now has a museum, the Gandhi Smarak Sangrahalaya. This had originally been located in Hridaya Kunj, Gandhi's own cottage in the ashram. Then in 1963, having been designed by the architect Charles Correa, the museum was built. The Sangrahalaya was then re-located into the well-designed and well-furnished museum building and was inaugurated by Jawaharlal Nehru, Prime Minister of India on 10 May 1963. Memorial activities could then continue.





Many buildings in the Ashram have names. There is a rich history of Gandhi's naming practices. At least some of the names of the buildings in the ashram, such as Nandini, and Rustom Block date back to the nineteen twenties, as is evident in a letter Gandhi wrote to Chhaganlal Joshi, the Ashram's new manager after Maganlal Gandhi's death in April 1928.[3]

Some of the names of the buildings and sites within the ashram are: Nandini, Vinoba Kutir,Upasana Mandir and Magan Niwas: This hut used to be the home of the ashram manager, Maganlal Gandhi. Maganlal was the cousin of Gandhi who he called the soul of the ashram.

With prior appointment from The Secretary, Gandhi Ashram Preservation and Memorial Trust, a walking tour can be organised. This 90-minute guided tour starts with a slide show and ends at the Library.



**Museum features**

- "My life is my message" gallery, consisting of 8 life-size paintings and more than 250 photo-enlargements.
- Gandhi in Ahmedabad Gallery, tracking.
- Life-size oil painting gallery
- Exhibition showing quotations, letters and other relics of Gandhi
- An important landmark of the ashram is Gandhi's cottage 'Hridaya Kunj',

# Scholarly Book on Gandhi

**Congruence of Gandhi 's Philosophy and Leadership in Contemporary India**
**M. R. Pattabhiram**
**Pages:** 256 + xxi
**Price :** Rs.435/-
**Published By:** Pearson India Education Services Pvt. Ltd.

This is the book by Sri Pattabhiram. Actually it is the thesis submitted in fulfillment of the requirements for the award of Degree of Doctor of Business Administration. Sri Pattabhiram did this research under the guidance of Dr.Charles Mercieca. Dr. Mercieca is a proffesor at SBS Swiss Business School, Zurich, Switzerland. It is a scholarly work and to be appreciated.

Sri Pattabhiram rightly says that Gandhi has been termed as a revolutionary leader who fought for India's Independence, with the weapon of peace and progress. And author is fully confident when he says that being carried out to the present time, even though Modern age has its own challenges.




Gandhi became a legend in his own time. He crossed the barriers of race, color, creed, nations and provided the concept of peace, which motivated the nation and its people to embrace peace. Gandhi was the one who spoke of overcoming evil by doing good, anger by love , violence by non violence and untruth by truth.

Gandhi's concept of leadership has been appreciated by one and all. Infact, it was Gandhi's charishma that made everybody act and act in the right spirit. Gandhi was not present in all the places of Independence struggle. People influenced by Gandhi, were able to contribute their might in better way.

Gandhi is relevant today, the author concludes.

There is Part A and Part B. there are 5 chapters in part A. There is questionnaire based on in this study.

In Part B there are 11 chapters giving details of the study. A good book for people who want to study Gandhiji.

**Chapter 1:** Offers an in - depth overview of Gandhian philosophy and its relevance and application in contemporary india.

**Chapter 2:** Describes the primary purpose of the study, the objectives of conducting the research and the process of research.

**Chapter 3:** Looks into the previous studies in Gandhian philosophy and value propositions of Gandhi and identifies the areas of research already covered by various studies on learning organizations.

**Chapter 4:** highlights the technique used to understand and analyze the data gathered through the questionnaire and interview schedules.

**Chapter 5:** Envisages the complete study into a nutshell by summarizying the findings of the analysis.

# Mohandas Gandhi Today

- Homer A. Jack



**Excerpts from an address delivered on October 1st, 1989 at Union Square Park, New York at the culmination of a Peace March. Dr. Jack is a U.S. peace activist and Editor of "The Wit and Wisdom of Gandhi" and "The Gandhi Reader".**

Many so-called "great" men and women lived during the 20th century. In my estimate, and many others, Gandhi was-so far-the greatest, by almost any definition of "great". He lived and as a continuing influence on dozens of movements and millions of people even today.

As we observe Gandhi's birth let us look briefly at the impact Gandhi is still making on our world, 41 years after his death in 1948.

Gandhi lives today in dozens of fields of endeavour. I will not use the term, Gandhism. In his life time, Gandhi warned: "If Gandhism is another name of sectarianism, it deserves to be destroyed. If I were to know after my death that what I stood for had degenerated into sectarianism, I should be sharply pained." Elsewhere, Gandhi admitted: "I have no desire to found a sect. I am really too ambitious to be satisfied with a sect or a following."

Gandhi is alive today wherever conflicts are being resolved, peacefully. Satyagraha, non–violent direct action of soul force was Gandhi's great contribution to humanity. It is being studied and used in many parts of the world today. Since Gandhi's death, there have arisen an American Gandhi (Martin Luther King Jr.), A South Korean Gandhi (Ham Sok Hon), a Palestinian Gandhi (Awad Mubarak), and several others. Gandhi's name was mentioned during the student demonstration in Beijing's Tiananmen Square and non-violent direct action has been intentionally used against apartheid in the defiance campaign of 1952 and again in the last few months. (Gandhi devised these techniques during his 26-year sojourn in South Africa, ending in 1914.)

Gandhi is alive today also wherever people want to live simpler, healthier lives and more intentional ones. Gandhi's



ashrams in South Africa and India were experiments in simple living, prototypes to "small is beautiful." Gandhi remains relevant for the growing Green movements throughout the world, for ecological awareness, for healthful foods (as well as vegetarianism).

Gandhi's prayer meetings have become a model for multi-religious meditation today. Also such international groups as the World Conference on Religion and Peace owe their origin, at least in part, to Gandhi's concept of religious dialogue as well as to his inspiration.

Gandhi is, finally, alive in every deliberation or negotiation for disarmament and peace. Wherever war and violence is abhorred and questioned, Gandhi is present. He lived 29 months into the nuclear age, asserting, "unless now the world adopts non-violence, it will spell certain suicide for mankind." He early demanded disarmament. His call for unilateral disarmament was, after his death, tried by Secretary Khrusuchev and President Kennedy, and then by President Gorbachev. His inspiration aided the great peace marches and demonstrations of our time, east and west, and his picture was often carried by those marchers.



Gandhi statues, Gandhi museums, Gandhi exhibits, Gandhi motion pictures, Gandhi plaques—all are important symbols so that a new generation can remember Gandhi. The Collected Works of Gandhi, now in 90 volumes, makes Gandhi's word available to all. Many volumes continue to be published about Gandhi, worldwide, including children's books. Thus his insights are alive in the hearts of countless persons of all ages, in all walks of life, in all climes and countries, perhaps as much outside India as in India itself.



Albert Einstein said it well: "Generations to come will scarce believe that such a one as this ever in flesh and blood walked upon this earth."

We walk today upon his earth to do Gandhi honour. Let us preserve this earth, and humanity, through non-violence, to honor Gandhi, and posterity.

**Source: Darshan, Vol. Six, October 1989**

# Gandhi Hill facelift



**With the Government clearing the decks for its renovation, good days are ahead for the historic site, where a memorial for Mahatma Gandhi stands and which has fallen into disrepair in the recent years.**

After years of neglect, Gandhi Hill, one of Vijayawada's most iconic landmarks, is set for a major revival with the Andhra Pradesh Government clearing the decks for a comprehensive renovation project that aims to restore the historic site to its former glory.

Atop the Gandhi Hill stands a memorial for Mahatma Gandhi, the first monument built in memory of the Father of the Nation after his assassination in 1948. A stone's throw from the Vijayawada Railway Station on the Tarapet side, this site has long served as a symbol of peace and national pride, attracting both tourists and locals alike.

Good days are ahead for Gandhi Hill, which deserves a pride of place. We are developing a comprehensive plan to groom the place into an iconic international tourist destination," chairman of Gandhi Smarak Nidhi, Andhra Pradesh, Gandhi P.C. Kaza, told .

The Andhra Pradesh Gandhi Smarak Nidhi, constituted in 2017 after bifurcation of the State, nominated a new committee for the Gandhi Hill Foundation (GHF), which convened its meeting on the Gandhi Hill recently. NTR district Collector G. Lakshmisha and Commissioner of Vijayawada Municipal







Corporation (VMC) H. M. Dhyanachandra also attended as ex officio members, to review the current status of the site.

"In phase-I (2025-2027), our top priority will be to improve the basic amenities and beautification of the main arch at the entry point," said Mr. Gandhi, adding that the plan included sprucing up the perimeter with greenery and landscaping, re-topping of the approach road from the entry point up to the stupa, renovation of the children's play area and the



surrounding areas atop the hill.

The GHF plans to transform the planetarium into a major attraction by using German technology "Restructuring and electrification of the mini toy train will also be taken up, as it is a major attraction for children," he said.

Mr. Gandhi said a Memorandum of Understanding (MoU) would be signed with the VMC and other local bodies and industry units to launch collaborative efforts to beautify the place.

"The Chief Minister will be the chief patron of GHF as per the



society bye-laws and his guidance, and advice will be taken for the overall development of Gandhi Hill," said Mr. Gandhi.

The Gandhi Hill got its name after the Mahatma's visit in 1921 to address a gathering at the foot of the hill, during the freedom struggle. From here, Bapu was said to have given a clarion call to people to embrace Swadeshi, eradicate untouchability and donate for Swaraj Koti Nidhi (of ₹1 by each person towards Swaraj Fund), which evoked enormous response and people contributed liberally.

As the place acquired importance, a memorial project was developed. A foundation stone for the Gandhi memorial planned by the Gandhi Smarak Nidhi, was laid here by the then Prime Minister, Lal Bahadur Shastri, on November 9, 1964, and a 52-ft. memorial stupa was unveiled by Dr. Zakir Hussain on October 6, 1968.

FROM THE HOUSE OF MYSORE SANDAL SOAP

# INDIA'S PRIDE, WORLD'S CHOICE

The only Soap with 100% Pure Natural Sandalwood Oil.




**Karnataka Soaps & Detergents Limited**
(A Government of Karnataka Undertaking)

Visit us at **www.mysoresandal.org**
Toll Free No. **1800 1039 073**

Amara Baapu Chintana Kannada / English Bi-monthly.
RNI Regd.No.KARBIL/2013/48372. Posted at Bangalore PSO, BG-560026. Periodically


# ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

[ಷೆಡ್ಯೂಲ್ಡ್ ಬ್ಯಾಂಕ್]

"ಉತ್ತುಂಗ", ನಂ.1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018.
ದೂರವಾಣಿ ಸಂ : 080 26676325/26983700/22976622/22976600 ಫಾಕ್ಸ್: 080–26628521
Website :www.karnatakaapex.com, E-mail : admin@karnatakaapex.com

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು 1915ರಲ್ಲಿ ಸ್ಥಾಪನೆಗೊಂಡು, 2025ನೇ ಸಾಲಿಗೆ 110 ವರ್ಷಗಳ ಸುದೀರ್ಘ ಸೇವೆಯನ್ನು ಪೂರೈಸಿರುತ್ತದೆ. ಬ್ಯಾಂಕು ರಾಜ್ಯದ ರೈತರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳನ್ನು ನೀಡುವುದಲ್ಲದೆ, ಬೆಂಗಳೂರು ನಗರದಲ್ಲಿರುವ ತನ್ನ 52 ಶಾಖೆಗಳ ಮೂಲಕ ತನ್ನ ಗ್ರಾಹಕರಿಗೆ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಿದೆ. ಬ್ಯಾಂಕು ಸ್ಥಾಪನೆಗೊಂಡಲ್ಲಿಂದ ಇಂದಿನವರೆಗೆ ನಿರಂತರವಾಗಿ ಲಾಭಗಳಿಸುತ್ತಾ ಬಂದಿದೆ.

**ಬ್ಯಾಂಕಿನ ಕಳೆದ 5 ವರ್ಷಗಳ ಹಣಕಾಸಿನ ಸ್ಥಿತಿಯು ಈ ಕೆಳಕಂಡಂತಿದೆ**
(ರೂ. ಕೋಟಿಗಳಲ್ಲಿ)

| ವಿವರ | 2020–21 | 2021–22 | 2022–23 | 2023–24 | 2024–25 |
|---|---|---|---|---|---|
| ಮೀಸಲುಗಳು | 1051.53 | 1223.19 | 1436.69 | 1575.06 | 1575.67 |
| ಸ್ವಂತ ನಿಧಿಗಳು | 1931.54 | 1945.20 | 2203.35 | 2337.75 | 2494.81 |
| ಠೇವಣಿಗಳು | 11868.73 | 12195.34 | 12654.12 | 13347.90 | 14275.05 |
| ತಂದ ಸಾಲಗಳು | 10543.04 | 12459.55 | 14805.97 | 16271.73 | 16997.52 |
| ಸಂಚಯನಗಳು | 5491.20 | 5937.71 | 5561.41 | 6828.62 | 5440.58 |
| ಮುಂಗಡಗಳು | 17838.42 | 20554.38 | 24443.45 | 24720.43 | 26692.39 |
| ದುಡಿಯುವ ಬಂಡವಾಳ | 24755.95 | 27367.04 | 30517.38 | 33167.20 | 35046.46 |
| ಲಾಭ | 300.41 | 448.94 | 522.89 | 376.38 | 370.29 |

☆ ಬ್ಯಾಂಕು ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿ, ದಿನಾಂಕ:31.03.2025ರ ಅಂತ್ಯಕ್ಕೆ ಬ್ಯಾಂಕಿನ ಠೇವಣಿಯು ರೂ.14275.05ಕೋಟಿ ಸಂಗ್ರಹಣೆಯಾಗಿದ್ದು, ದುಡಿಯುವ ಬಂಡವಾಳವು ರೂ.35,046.46ಕೋಟಿಗಳಿಗೆ ಏರಿಕೆಯಾಗಿರುತ್ತದೆ.

☆ 2024–25ನೇ ಸಾಲಿನಲ್ಲಿ ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು 6040 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ 29.21ಲಕ್ಷ ರೈತರಿಗೆ ರೂ.24298.33 ಕೋಟಿಗಳಷ್ಟು ಕೃಷಿ ಸಾಲವನ್ನು ವಿತರಿಸಲಾಗಿದ್ದು, ಈ ಪೈಕಿ 28.97 ಲಕ್ಷ ರೈತರಿಗೆ ರೂ.23,288.97ಕೋಟಿಗಳಷ್ಟು ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲವನ್ನು ವಿತರಿಸಲಾಗಿದೆ. ಅಪೆಕ್ಸ್ ಬ್ಯಾಂಕಿನ ಮುಂದಾಳತ್ವದಲ್ಲಿ ಸ್ವಸಹಾಯ ಗುಂಪುಗಳಿಗೆ ಶೂನ್ಯ ಬಡ್ಡಿದರದಲ್ಲಿ ಡಿ.ಸಿ.ಸಿ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೂ.1010.05 ಕೋಟಿಗಳಷ್ಟು ಸಂಚಿತ ಮುಂಗಡಗಳನ್ನು ನೀಡಲಾಗಿದೆ.

☆ ಬ್ಯಾಂಕು ಗ್ರಾಮೀಣ ಪ್ರದೇಶದ ಜನತೆಯ ಕೃಷಿಗೆ ಸಂಬಂಧಿಸಿದಂತೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಭಾರತ ಸರ್ಕಾರ ಹಾಗೂ ನಬಾರ್ಡ್ ಸಹಯೋಗದೊಂದಿಗೆ Transforming Primary Agricultural Co-operative Societies (PACS) into Multi Service Centers (MSC) ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ವ್ಯವಹಾರ ವೈವಿಧ್ಯಕರಣ ಹಾಗೂ ನವೀನ ಉತ್ಪನ್ನಗಳ ಅಭಿವೃದ್ಧಿ ಕೋಶ (BDPIC) ರಚನೆ ಮಾಡಲಾಗಿರುತ್ತದೆ.

**ಪ್ರಸ್ತುತ ಬ್ಯಾಂಕು ಠೇವಣಿಗಳ ಮೇಲೆ ಗರಿಷ್ಠ ಶೇ.7.25ರಷ್ಟು ಬಡ್ಡಿ ನೀಡುತ್ತಿದೆ ಹಾಗೂ ಹಿರಿಯ ನಾಗರೀಕರಿಗೆ ಶೇ.0.50ರಷ್ಟು ಹೆಚ್ಚಿನ ಬಡ್ಡಿದರ ನೀಡಲಾಗುತ್ತಿದೆ.**

ಪ್ರಸ್ತುತ ಬ್ಯಾಂಕಿನ ಎಲ್ಲಾ ಶಾಖೆಗಳು ಮತ್ತು ಕೇಂದ್ರ ಕಚೇರಿಯ ವ್ಯವಹಾರಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿದ್ದು, ಎನಿ ಬ್ರ್ಯಾಂಚ್ ಬ್ಯಾಂಕಿಂಗ್ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗಿದೆ. ಕೇಂದ್ರೀಕೃತ ಕ್ಲಿಯರಿಂಗ್ ಪದ್ಧತಿ (ECS/CTS) ಜಾರಿಯಲ್ಲಿದೆ ಹಾಗೂ RTGS/NEFT, POS, e-Commerce, ATM, IMPS,UPI ಸೌಲಭ್ಯ (Google Pay, PhonePe, Paytm) ಮತ್ತು Mobile Banking ಸೌಲಭ್ಯಗಳು ಲಭ್ಯವಿದೆ. ರಾಜ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ POS, e-Commerce, ATM, IMPS ಮತ್ತು UPI ಸೌಲಭ್ಯಗಳ ಸಹ ಸದಸ್ಯತ್ವವನ್ನು ಬ್ಯಾಂಕಿನ ವತಿಯಿಂದ ಒದಗಿಸಲಾಗಿದೆ. ಬ್ಯಾಂಕು ಎಲ್ಲಾ ಶಾಖೆಗಳ ಮೂಲಕ ಈ–ಸ್ಟ್ಯಾಂಪಿಂಗ್ ಮತ್ತು ಲಾಕರ್ ಸೌಲಭ್ಯವನ್ನು ನೀಡುತ್ತಿದೆ. ಬ್ಯಾಂಕಿನಲ್ಲಿ ಗೃಹ ಸಾಲ, ವಾಹನ ಸಾಲ, ಚಿನ್ನಾಭರಣ ಸಾಲ, ಗೃಹ / ನಿವೇಶನ ಅಡಮಾನ ಸಾಲ, ಕಂತು ಸಾಲ, ಶಿಕ್ಷಣ ಸಾಲ, ಸ್ವಯಂ ಉದ್ಯೋಗಿಗಳಿಗೆ ಸಾಲ, ವೃತ್ತಿಪರರಿಗೆ ಸಾಲ, ಯೋಜನಾಬದ್ಧ ಸಾಲ ಹಾಗೂ ಕನ್ಸಾರ್ಟಿಯಂ ವ್ಯವಸ್ಥೆಯಡಿಯಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ವಿವಿಧ ರೀತಿಯ ಸಾಲ ಯೋಜನೆಗಳಿದ್ದು, ಕಡಿಮೆ ಬಡ್ಡಿದರಗಳಲ್ಲಿ ಲಭ್ಯವಿದೆ.

ಬ್ಯಾಂಕು ಇಫ್ಕೋ ಟೋಕಿಯೋ ಸಾಮಾನ್ಯ ವಿಮಾ ಕಂಪೆನಿ ಸಹಯೋಗದೊಂದಿಗೆ ವಿಮಾ ಯೋಜನೆ ಮತ್ತು ಎಚ್‌ಡಿಎಫ್‌ಸಿ ಜೀವವಿಮಾ ಕಂಪೆನಿಯ ಸಹಯೋಗದೊಂದಿಗೆ ಜೀವ ವಿಮಾಯೋಜನೆಗಳ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುತ್ತಿದೆ ಹಾಗೂ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾಯೋಜನೆ ಮತ್ತು ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆಗಳನ್ನು ಬ್ಯಾಂಕಿನಲ್ಲಿ ಅನುಷ್ಠಾನಗೊಳಿಸಲಾಗಿದೆ.

**ಸಾರ್ವಜನಿಕರು ಬ್ಯಾಂಕು ನೀಡುತ್ತಿರುವ ಸಾಲ ಸೌಲಭ್ಯಗಳನ್ನು ಉಳಿತಾಯ/ಚಾಲ್ತಿ ಖಾತೆ ತೆರೆಯುವುದರ ಮೂಲಕ ಸದುಪಯೋಗ ಪಡೆದುಕೊಳ್ಳಲು ವಿನಂತಿ.**



ಶ್ರೀ ಬೆಳ್ಳಿ ಪ್ರಕಾಶ್
ಅಧ್ಯಕ್ಷರು



ಶ್ರೀ ಸಿ.ಎನ್.ದೇವರಾಜ್, ಕೆ.ಸಿ.ಎಸ್,
ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಶ್ರೀ ಜಿ.ಡಿ. ಹರೀಶ್, ಎಂ.ಎಲ್.ಎ,
ಉಪಾಧ್ಯಕ್ಷರು


Printed & Published by : JEERIGE LOKESH, Printed at Screen Impressions,
No. 88, 1st floor, Jeerige building, 11th cross, Malleswaram, Bangalore - 560 003
Published at Gandhi Bhavana, Kumara Park East, Bangalore-560001, Editor : JEERIGE LOKESH.